
ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಪುಟಗಳು : 36 ರೂ. 28/- ಕನ್ನಡ-ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA

ಸಂಪುಟ-06 • ಸಂಚಿಕೆ-05 • ಅಕ್ಟೋಬರ್ 2024



ರೂ. 28/- BAAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-06 • ಸಂಚಿಕೆ-05 • ಅಕ್ಟೋಬರ್ 2024

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ-ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations,** Bangalore

ಪತ್ರಗಳು

ಮಾನ್ಯರೆ ,

'ಬಾಪು ಪ್ರಪಂಚ,' ಸೆಪ್ಟೆಂಬರ್ ಸಂಚಿಕೆ ಎಂದಿನಂತೆ ತಲುಪಿದೆ. ಧನ್ಯವಾದಗಳು.

ಗಾಂಧಿ ಸ್ಮಾರಕ ನಿಧಿಯ 75ನೇ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಿದ ನಿಮಗೆ ಅಭಿನಂದನೆಗಳು. 21ನೆಯ ಶತಮಾನಕ್ಕೆ ಗಾಂಧೀಜಿ ಪ್ರಸ್ತುತತೆ ಕುರಿತ ಮಹತ್ವದ ಚರ್ಚೆ ನಡೆದಿದೆ.

ಪ್ರಮುಖವಾಗಿ ಮುಖ್ಯ ಮಂತ್ರಿಗಳು ಬಹಳ ಮೌಲಿಕ ಮಾತುಗಳನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ, ಮನುಕುಲದ ಭವಿಷ್ಯ ಕುರಿತಂತೆ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಕಾಳಜಿಗಳನ್ನು ಪಾಂಡಿತ್ಯಪೂರ್ಣವಾಗಿ ವಿಶ್ಲೇಷಿಸಿ ವ್ಯಾಖ್ಯಾನಿಸಿದ್ದಾರೆ.

ಸ್ಮಾರಕ ನಿಧಿಯ ಹುಟ್ಟು, ಬೆಳವಣಿಗೆಯನ್ನು ಕುರಿತ ನಿಮ್ಮ ಲೇಖನ ಸಂಪೂರ್ಣ ಮಾಹಿತಿಯಿಂದ ಕೂಡಿದೆ.

ಗಾಂಧಿ ಪ್ರೀತಿಸುವ ನಮಗೆ ನಿಮ್ಮ 'ಬಾಪು ಪ್ರಪಂಚ' ಯಾವತ್ತೂ ಆತ್ಮೀಯ ಕೊಡುಗೆ.

ಶುಭ ಹಾರೈಕೆಗಳು.

ಪ್ರೊ. ಎಚ್. ಎಸ್ ಈಶ್ವರ್
ಮಾಧ್ಯಮ ಶಿಕ್ಷಣ ತಜ್ಞರು, ಬೆಂಗಳೂರು

ಮಾನ್ಯರೆ ,

ಬಾಪು ಪ್ರಪಂಚ ಪತ್ರಿಕೆಯಲ್ಲಿ ಸಮಕಾಲೀನ ಸಮಸ್ಯೆಗಳಿಗೆ ಗಾಂಧಿ ಚಿಂತನೆಗಳು ಹೇಗೆ ಪರಿಹಾರ ನೀಡುವ ಶಕ್ತಿ ಹೊಂದಿವೆ ಎನ್ನುವುದರ ಬಗ್ಗೆ ಬೆಳಕು ಚೆಲ್ಲುವ ಲೇಖನಗಳನ್ನು ಪ್ರಕಟಿಸಿ .

ಈಗಲೂ ಗಾಂಧಿ ಮಾರ್ಗದಲ್ಲಿ ಯಶಸ್ವಿಯಾಗಿ ನಡೆಯುತ್ತಿರುವ ಸಂಘ ಸಂಸ್ಥೆಗಳು ಮತ್ತು ವ್ಯಕ್ತಿಗಳ ಪರಿಚಯ ಲೇಖನಗಳಿರಲಿ . ಅಂತರ ರಾಷ್ಟ್ರೀಯ ಮಟ್ಟದಲ್ಲಿ ಗಾಂಧಿ ವಿಚಾರ ಚಿಂತನೆಗಳು ಹೇಗೆ ಪ್ರಚಾರವಾಗುತ್ತಿವೆ ಎನ್ನುವ ಸಂಕ್ಷಿಪ್ತ ಮಾಹಿತಿಗಳನ್ನು ತಿಳಿಸಿ .

ಮಹದೇವ ಪ್ರಸಾದ್
ಕೊಳ್ಳೇಗಾಲ



ಪ್ರಿಯರೆ,


ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.


ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು https://gandhibhavan.in ಜಾಲತಾಣದಲ್ಲಿ ವೀಕ್ಷಿಸಿ.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :

ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.







ಎಲ್ಲರ ಗಾಂಧಿ

ಗಾಂಧೀಜಿಯನ್ನು ಬಣ್ಣಿಸಲು ಹೊರಟರೆ ಅವರ ವ್ಯಕ್ತಿತ್ವದ ಹಲವಾರು ಮುಖಗಳು ಕಾಣತೊಡಗುತ್ತವೆ:

ಬಾಲ್ಯದಲ್ಲಿ ಹರಿಶ್ಚಂದ್ರ, ಶ್ರವಣಕುಮಾರರ ಕತೆಗೆ ಮಿಡಿದು, ಕಣ್ಣೀರಿಟ್ಟ ಮುಗ್ಧ ಮನಸ್ಸನ್ನು ಕೊನೆತನಕ ಉಳಿಸಿಕೊಂಡ ಮಗು. ಕಾನೂನು ಕಲಿತು, ಸ್ಪಷ್ಟವಾಗಿ ಯೋಚಿಸುವ, ನ್ಯಾಯಯುತ ಹೋರಾಟವನ್ನು ತರ್ಕಬದ್ಧವಾಗಿ ಕಟ್ಟುವ, ನ್ಯಾಯ–ನೈತಿಕತೆಗಳನ್ನು ಬೆಸೆದ ನ್ಯಾಯವಾದಿ. ನೈತಿಕತೆ–ಸತ್ಯ ಬೆಸೆದ ಪತ್ರಕರ್ತ. ಸತ್ಯಾಗ್ರಹವನ್ನು ಹೋರಾಟತತ್ವವನ್ನಾಗಿ ಮಾಡಿದ ತತ್ವಜ್ಞಾನಿ. ಅಹಿಂಸೆಯನ್ನು ದೈನಂದಿನ ತತ್ವವಾಗಿ, ಸಂಘಟಿತ ಜನತಾ ಹೋರಾಟದ ಪ್ರಬಲ ಅಸ್ತ್ರವನ್ನಾಗಿ ರೂಪಿಸಿಕೊಟ್ಟ ಮೊದಲ ಲೋಕನಾಯಕ. ಹಿಡಿ ಉಪ್ಪು ತಯಾರಿಸಿ ಸೂರ್ಯ ಮುಳುಗದ ಸಾಮ್ರಾಜ್ಯಕ್ಕೆ ಸವಾಲೆಸೆದ ನಿರ್ಭೀತ ಚಳವಳಿಗಾರ. ಉಪ್ಪು, ಚರಕದಂಥ ಪರಿಚಿತ ವಸ್ತುಗಳಿಗೆ ವ್ಯಾಪಕಾರ್ಥ ಕೊಟ್ಟ ಕವಿ. 'ಸ್ವರಾಜ್ಯ'ವು ಒಂದು ದೇಶ ತನ್ನನ್ನು ತಾನು ಆಳಿಕೊಳ್ಳುವ ತತ್ವವಷ್ಟೇ ಅಲ್ಲ, ಅದು ಮನುಷ್ಯ ತನ್ನನ್ನು ತಾನು ಆಳಿಕೊಳ್ಳುವ ತತ್ವ ಕೂಡ ಎಂಬ ವ್ಯಾಖ್ಯಾನ ಕೊಟ್ಟ ಸೂಕ್ಷ್ಮಚಿಂತಕ...

ದೈಹಿಕ ದುಡಿಮೆಯ ಶ್ರೇಷ್ಠತೆಯನ್ನು ಪ್ರತಿಪಾದಿಸಿ, ಚರಕ, ಖಾದಿಗಳನ್ನು ಗ್ರಾಮದ ಸ್ವಾವಲಂಬನೆಯ ಸಹಜ ಸಾಧನಗಳನ್ನಾಗಿ ಮಾಡಿದ ಗ್ರಾಮಕೇಂದ್ರಿತ ಅರ್ಥಶಾಸ್ತ್ರಜ್ಞ. ಜಗತ್ತಿನ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಒಂದು ದೇಶದ ಸ್ವಾತಂತ್ರ್ಯ ಹೋರಾಟವನ್ನು ಒಂದು ಕೊಳೆತ ಸಮಾಜದ ಪರಿವರ್ತನೆಯ ಹೋರಾಟವನ್ನಾಗಿ ಪರಿವರ್ತಿಸಿದ ಸಾಮಾಜಿಕ ನಾಯಕ. ಅಸ್ಪೃಶ್ಯತೆಯ ವಿರುದ್ಧ ನಿರಂತರ ಹೋರಾಟ ಮಾಡಿದ ಸಮಾಜ ಸುಧಾರಕ. ಜಗತ್ತಿನ ಎಲ್ಲ ಧರ್ಮಗಳ ಒಳತಿರುಳನ್ನು ಬೆಸೆದು ಮಾನವೀಯ ಹಿಂದೂ ಧರ್ಮವನ್ನು ರೂಪಿಸಲು ಹೊರಟ ಧಾರ್ಮಿಕ ಚಿಂತಕ. ಆಧುನಿಕತೆ, ಆಧುನಿಕ ನಾಗರಿಕತೆ ಹಾಗೂ ಪಶ್ಚಿಮ ರೂಪಿಸಿಕೊಂಡ ದಮನದ ಅಸ್ತ್ರಗಳನ್ನು ಜಗತ್ತಿಗೆ ತೋರಿಸಿದ ಸಂಸ್ಕೃತಿ ವಿಮರ್ಶಕ. ಆಧುನಿಕ ಗುಜರಾತಿ ಗದ್ಯದ ಪ್ರವರ್ತಕ; ಗುಜರಾತಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ನಿರಂತರವಾಗಿ ಬರೆದು, ಸಾವಿರಾರು ಪುಟಗಳ ಸರಳ, ನೇರ ಬರವಣಿಗೆ ಮಾಡಿ ಕೋಟಿಗಟ್ಟಲೆ ಓದುಗರನ್ನು ತಲುಪಿದ ಹಾಗೂ ತಲುಪುತ್ತಲೇ ಇರುವ ಲೇಖಕ...

ತನ್ನ ಬದುಕು ಹಾಗೂ ಚಿಂತನೆಗಳಲ್ಲಿ ನುಸುಳಿದ ಹಲಬಗೆಯ ವೈರುಧ್ಯಗಳನ್ನು ಪರೀಕ್ಷೆಗೆ ಒಳಪಡಿಸಿಕೊಂಡ ಸ್ವ–ಪರೀಕ್ಷಕ. ಈ ದೇಶದ ಮೂಲ ಕಾಯಿಲೆಗಳಾದ ಅಸ್ಪೃಶ್ಯತೆ, ಅಸಮಾನತೆ, ಮೂಲಭೂತವಾದ, ಕೋಮುವಾದಗಳನ್ನು ಗುಣಪಡಿಸಲು ಸದಾ ಶ್ರಮಿಸಿದ ಡಾಕ್ಟರು. ದೇಹ ಕುರಿತು ಆಳವಾಗಿ ಚಿಂತಿಸಿ ಪ್ರಯೋಗಗಳನ್ನು ಮಾಡಿದ ಪ್ರಯೋಗಶೀಲ. ಮೊದಲ ಘಟ್ಟದ ಮುಖ್ಯ ನಿರ್ವಸಾಹತೀಕರಣ ತಾತ್ವಿಕ. ಎದುರಾಳಿಯೆದುರು ದಿಟ್ಟವಾಗಿ ನಿಲ್ಲಬಲ್ಲ ನಿರ್ಭೀತ; ಕುವೆಂಪು ಬಣ್ಣಿಸಿದಂತೆ, 'ಕ್ರೈಸ್ತ ಬುದ್ಧರ ಮೈತ್ರಿಯಂ ಸಾಧಿಸುತ ವಿಶ್ವನಾಯಕರ ಪಂಕ್ತಿಯಲಿ' ನಿಂತ, 'ಯಂತ್ರ ನಾಗರಿಕತೆಯ ರಾಜಕೀಯ ಕುಟಿಲ ತಂತ್ರಕಥ್ಯಾತ್ಮವನು' ತಂದ ಅನನ್ಯ ಸಂತ...

ಹೀಗೆ, ಗಾಂಧೀ ವ್ಯಕ್ತಿತ್ವ, ಚಿಂತನೆ, ಕ್ರಿಯೆ ಪ್ರಭಾವಗಳನ್ನು ಬಣ್ಣಿಸುತ್ತಲೇ ಹೋಗಬಹುದು. 'ಗಾಂಧಿಯನ್ನು ಬಣ್ಣಿಸುವುದೆಂದರೆ ಹಿಮಾಲಯವನ್ನು ಬಣ್ಣಿಸಲು ಪ್ರಯತ್ನಿಸಿದಂತೆ' ಎಂಬ ಬರ್ನಾರ್ಡ್ ಶಾ ಅವರ ಮಾತು ಗಾಂಧೀಜಿಯನ್ನು ಬಣ್ಣಿಸುವ ಸವಾಲಿನ ಜೊತೆಗೇ ಅವರ ವ್ಯಕ್ತಿತ್ವದ ಸಂಕೀರ್ಣತೆ, ಅಗಾಧತೆಯನ್ನೂ ಹೇಳುತ್ತದೆ.

– ನಟರಾಜ್ ಹುಳಿಯಾರ್

'ಎಲ್ಲರ ಗಾಂಧೀಜಿ' (ಮಹಾತ್ಮ ಗಾಂಧೀಜಿಯವರ ಮಾತು, ಬರಹ, ಚಿಂತನೆ, ಪುಸ್ತಕದ ಮುನ್ನುಡಿಯಲ್ಲಿ, 2022)



ಸ್ಮಾರ್ಟ್ ಗ್ರಾಮಗಳು ಬೇಕು....

–ಕೊಳ್ಳೇಗಾಲ ಶರ್ಮ

ಅಕ್ಟೋಬರ್ 2. ಭಾರತ ಸ್ವತಂತ್ರವಾಗಲು ಶ್ರಮಿಸಿದ ಹಿರಿಯ ಜೀವ ಮಹಾತ್ಮಾ ಗಾಂಧಿ ಹುಟ್ಟಿದ ದಿನ. ಕೃತಜ್ಞತೆಯಿಂದ ದೇಶ ಇದನ್ನು ಗಾಂಧೀ ಜಯಂತಿ ಎಂದು ಆಚರಿಸುತ್ತದೆ. ಗಾಂಧಿಯ ಆಶಯಗಳು, ಕನಸುಗಳು ಹಾಗೂ ಮೌಲ್ಯಗಳತ್ತ ಇನ್ನೊಮ್ಮೆ ಕಣ್ಣಾಡಿಸುವ ದಿನ. ಗಾಂಧಿ ಜಯಂತಿಗೂ ವಿಜ್ಞಾನ ಪತ್ರಿಕೆಗೂ ಸಂಬಂಧವೇನು ಎನ್ನುವ ಪ್ರಶ್ನೆ ಸಹಜವೇ. ಏಕೆಂದರೆ ಗ್ರಾಮ ಸ್ವರಾಜ್ ಎಂದು ಘೋಷಿಸಿದ ಮಹಾತ್ಮಾ ಗಾಂಧಿ, ಕಸುಬು ಕಸಿದುಕೊಳ್ಳುವ ತಂತ್ರಜ್ಞಾನ ಬೇಕೇ ಎಂದು ಪ್ರಶ್ನಿಸಿದ್ದರು. ಅಂದಿನಿಂದ ಗಾಂಧೀವಾದ ಎಂದರೆ ತಂತ್ರಜ್ಞಾನ ವಿರೋಧಿ ಎನ್ನುವ ನಂಬಿಕೆ ಬಲವಾಗಿ ಬೆಳೆದಿದೆ. ಇದು ನಿಜವೇ? ಗಾಂಧಿಯವರು ನಿಜಕ್ಕೂ ತಂತ್ರಜ್ಞಾನವನ್ನು ಹಳಿದಿದ್ದರೇ ಎನ್ನುವುದು ಒಂದು ಪ್ರಶ್ನೆ. ಮತ್ತೊಂದು ಬದಿಯಲ್ಲಿ ಹಾಗಿದ್ದರೆ ತಂತ್ರಜ್ಞಾನವೇ ಬದುಕಾಗಿ ಬಿಟ್ಟಿರುವ ಇಂದಿನ ಯುಗದಲ್ಲಿ ಗಾಂಧಿ ಇದ್ದಿದ್ದರೆ ಏನು ಹೇಳುತ್ತಿದ್ದರೋ ಎನ್ನುವ ಕುತೂಹಲವೂ ಇರುತ್ತದೆ.

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಕಷ್ಟವಲ್ಲ. ಗಾಂಧಿಯವರು 1931ರಲ್ಲಿ ಲಂಡನ್ನಿನಲ್ಲಿ ಮಾಡಿದ್ದ □ಭಾರತದ ಭವಿಷ್ಯ□ ಎನ್ನುವ ಭಾಷಣ ಅವರ ಕನಸುಗಳನ್ನು ತೆರೆದಿಡುತ್ತದೆ. ಲಂಡನ್ನಿನಲ್ಲಿ, ಭಾರತದ ಆಡಳಿತದ ಕುರಿತು ಅಂದಿನ ಬ್ರಿಟಿಷ್ ಸರಕಾರ ನಡೆಸಿದ್ದ ಸಭೆಯಲ್ಲಿ ಮಹಾತ್ಮ ಗಾಂಧಿ ವಿಶೇಷ ಉಪನ್ಯಾಸವನ್ನು ನೀಡಿದ್ದರು. ಭಾರತದ ಭವಿಷ್ಯ ಎನ್ನುವ ಹೆಸರಿನಲ್ಲಿ ಅಂದಿನ ಭಾರತದ ಆರ್ಥಿಕ ಸ್ಥಿತಿಗತಿಗಳನ್ನು ವಿವರಿಸಿ, ಸ್ವತಂತ್ರ ಭಾರತ ಹೇಗಿರಬೇಕು ಎನ್ನುವ ತಮ್ಮ ಕನಸನ್ನು ಮುಂದಿಟ್ಟಿದ್ದರು. ಈ ಕನಸುಗಳಲ್ಲಿ ಮೂರು ಅಂಶಗಳು ಪ್ರಧಾನವಾಗಿದ್ದುವು. ಮೊದಲನೆಯದು, ಗ್ರಾಮ ಅಥವಾ ಹಳ್ಳಿಗಳ ಸ್ವಾವಲಂಬನೆ, ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣದ ಬಗ್ಗೆ ಮಾತನಾಡಿದ್ದರು.

ಇಂದಿನ ಜನಸಂಖ್ಯೆಯಲ್ಲಿ ಕೇವಲ ಮೂರರಲ್ಲೊಂದು ಅಂಶದಷ್ಟು ಮಾತ್ರವೇ ಇದ್ದ ಅಂದಿನ ಭಾರತದಲ್ಲಿಯೂ ಶೇಕಡ 80ರಷ್ಟು ಜನ ಗ್ರಾಮವಾಸಿಗಳಾಗಿದ್ದರು. ಹೆಚ್ಚೂ ಕಡಿಮೆ ಅಷ್ಟೇ ಪ್ರಮಾಣದ ನಿರಕ್ಷರರಿದ್ದರು. ವರ್ಷದಲ್ಲಿ ಕೇವಲ



(“ಕುತೂಹಲಿ” ಸಮಗ್ರ ವಿಜ್ಞಾನ ಮಾಸಿಕ ಪತ್ರಿಕೆ ಕೊಳ್ಳೇಗಾಲ ಶರ್ಮ ಅವರ ಸಂಪಾದಕತ್ವದಲ್ಲಿ ಕಳೆದ ಒಂದು ವರ್ಷದಿಂದ ಪ್ರಕಟವಾಗುತ್ತಿದೆ. ಇದಕ್ಕೆ ಕನ್ನಡಿಗರು ಪ್ರೋತ್ಸಾಹ ನೀಡಲಿ ಎಂದು ಬಾಪೂ ಪ್ರಪಂಚ ಆಶಯ ವ್ಯಕ್ತ ಪಡಿಸುತ್ತದೆ.)

ಮೂರೋ, ಆರೋ ತಿಂಗಳು ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಉದ್ಯೋಗ ದೊರೆಯುತ್ತಿತ್ತು. ಉಳಿದ ಕಾಲವೆಲ್ಲವೂ ಬಹುತೇಕ ಯುವಜನರು ನಿರುದ್ಯೋಗಿಗಳಾಗಿರುತ್ತಿದ್ದರು. ಬಡಜನರ ಪ್ರಮಾಣವೂ ಹೆಚ್ಚಿತ್ತು.

ದೇಶದ ಶೇಕಡ ಎಂಭತ್ತರಷ್ಟು ಮಂದಿಗೆ ಆಹಾರ ದೊರಕುವಂತಾಗಬೇಕು. ನಿರಂತರ ಉದ್ಯೋಗ ದೊರೆಯಬೇಕು. ಇದು ಸಾಧ್ಯವಾಗಬೇಕಾದರೆ ಚರಕದಂತಹ ತಂತ್ರಜ್ಞಾನ ಬೇಕು ಎಂದಿದ್ದರು. ಚರಕವು ಗ್ರಾಮೀಣ ಪ್ರದೇಶದಲ್ಲಿ ಬೆಳೆಯುವ ವಸ್ತುವಿಗೆ ಅಲ್ಲಿಯೇ ಮೌಲ್ಯವರ್ಧನೆ ಮಾಡಲು ನೆರವಾಗುತ್ತದೆಯಷ್ಟೆ. ಇದರಿಂದ ಗ್ರಾಮೀಣ ಯುವಕರಿಗೆ ಉದ್ಯೋಗವೂ ದೊರೆತಂತಾಗುತ್ತದೆ. ಹಳ್ಳಿಗಳ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುತ್ತದೆ. ಹಳ್ಳಿಗಳಲ್ಲಿನ ಸಾಮಾಜಿಕ ವ್ಯವಸ್ಥೆ ಸುಸ್ಥಿರವಾಗಿ ಉಳಿಯುತ್ತದೆ ಎನ್ನುವುದು ಗಾಂಧಿಯವರ ವಾದವಾಗಿತ್ತು.

ಇಂದು ಇದರ ಸತ್ಯಾಸತ್ಯತೆ ಅರಿವಾಗುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕೃಷಿಯ ಬದಲಿಗೆ ಇತರೆ ಉದ್ಯೋಗಗಳೂ ಹೆಚ್ಚಿದವಾದರೂ, ಅವು ನಗರಗಳಲ್ಲಿ ಕೇಂದ್ರೀಕೃತವಾದುವು. ನಗರಗಳ ಬೆಳವಣಿಗೆ ಹಳ್ಳಿಗಳಿಗಿಂತಲೂ ವೇಗವಾಗಿತ್ತು. ಹಳ್ಳಿಗಳಿಂದ ಪಟ್ಟಣಗಳೀಗೆ ಜನ ವಲಸೆ ಬಂದರು. ಇಂದಿಗೂ ಉದ್ಯೋಗವನ್ನು ಅರಸಿ ಪಟ್ಟಣಕ್ಕೆ ಬರುವ ಜನರ ಸಂಖ್ಯೆ ಹೆಚ್ಚು. ನಗರಗಳಲ್ಲಿ ಜನದಟ್ಟಣೆ ಹೆಚ್ಚಿ, ನೀರು, ವಸತಿ ಮೊದಲಾದ ಮೂಲಭೂತ ಸೌಕರ್ಯಗಳಿಗೆ ಕೊರತೆ ಹಾಗೂ ತನ್ಮೂಲಕ ಅಪಾರ ಬೇಡಿಕೆ ಉಂಟಾಗುತ್ತಿದೆ. ಇನ್ನೊಂದೆಡೆ, ಜನದಟ್ಟಣೆಯಿಂದಾಗಿ ಕಸ, ತ್ಯಾಜ್ಯ ಹಾಗೂ ವಾಯುಮಾಲಿನ್ಯವೂ ಹೆಚ್ಚಿದೆ. ಬಹುಶಃ ಹಳ್ಳಿಗಳಲ್ಲಿಯೇ ಉದ್ಯೋಗ ಸೃಷ್ಟಿಸಬಲ್ಲ ತಂತ್ರಜ್ಞಾನಗಳು ಇದ್ದಿದ್ದರೆ ಈ ಸಮಸ್ಯೆಗೆ ಸ್ವಲ್ಪವಾದರೂ ಪರಿಹಾರ ದೊರಕುತ್ತಿತ್ತು.

ಗಾಂಧಿಯವರ ಇಂತಹ ಕನಸುಗಳನ್ನು ನನಸಾಗಿಸಲು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಲು ಈ ಹಿಂದೆ ಹಲವು ದಾರ್ಶನಿಕರು ಯೋಚಿಸಿದ್ದುಂಟು. ಅದರ ಫಲವಾಗಿ ಹಳ್ಳಿಗಳಲ್ಲಿ ಬಳಸಬಹುದಾದಂತಹ ಹಲವು ತಂತ್ರಜ್ಞಾನಗಳು ಹಾಗೂ ಸಾಧನಗಳೂ ಸೃಷ್ಟಿಯಾಗಿದ್ದುವು. ಆದರೆ ಅವು ಯಶಸ್ಸು ಪಡೆಯಲಿಲ್ಲ.

ಇದಕ್ಕೆ ಒಂದು ಉದಾಹರಣೆ ಬಯೋಡೀಸೆಲ್ಲು. ಭಾರತ ಸ್ವತಂತ್ರವಾದ ಮೊದಲ ದಶಕದಲ್ಲಿಯೇ ಈ ಬಗೆಯಲ್ಲಿ ಇಂಧನವನ್ನು ನಾವೇ ತಯಾರಿಸಿಕೊಳ್ಳಬಹುದು ಎಂದು ಸುಪ್ರಸಿದ್ಧ ವಿಜ್ಞಾನಿ ಸತೀಶ್ ಧವನ್ ಮೊದಲಾದವರು ಕನಸು ಕಂಡಿದ್ದರು. ಪೆಟ್ರೋಲಿಯಂ ಇಂಧನದ ಆಮದು ದುಬಾರಿಯಾಗಿದ್ದ ಕಾಲ ಅದು. ಹತ್ತಿ, ಸೋಯಾ ಮೊದಲಾದ ಬೀಜಗಳಿಂದ ತೆಗೆದ ಎಣ್ಣೆಯನ್ನು ಇಂಧನವನ್ನಾಗಿ ಪರಿವರ್ತಿಸಲೂ ಯೋಜಿಸಲಾಗಿತ್ತು. ಆದರೆ ಎಣ್ಣೆಯನ್ನು ಇಂಧನ ಮಾಡುವ ವಿಜ್ಞಾನ ಕರಗತವಾದರೂ, ಅದಕ್ಕೆ ಬೇಕಾದ ಮೂಲವಸ್ತುಗಳನ್ನು ಸಂಗ್ರಹಿಸಿ, ಸಾಗಿಸುವ ವಿಧಾನಗಳು ಹಾಗೂ ಅದನ್ನು ಆಗಗೊಡುವ ನೀತಿಗಳು ರೂಪುಗೊಳ್ಳಲಿಲ್ಲ.

ಬಹುಶಃ ಗ್ರಾಮಗಳಲ್ಲಿಯೇ ವಸ್ತುಗಳನ್ನು ತಯಾರಿಸಲು ನೆರವಾಗುವ ತಂತ್ರಜ್ಞಾನಗಳ ಜೊತೆಗೆ, ಮಾಹಿತಿ ತಂತ್ರಜ್ಞಾನ ಹಾಗೂ ಟೆಲಿಕಮ್ಯೂನಿಕೇಶನ್ಸ್ ಮತ್ತು ಸಾರಿಗೆ ವ್ಯವಸ್ಥೆಗಳು ಒದಗಿಸಿರುವ ಸವಲತ್ತುಗಳನ್ನು ಸೇರಿಸಿದರೆ ಗಾಂಧಿಯವರ ಕನಸಿನಂತೆ ಹಳ್ಳಿಗಳಲ್ಲಿ ವಸ್ತುಗಳನ್ನು ಉತ್ಪಾದಿಸಿ, ಪಟ್ಟಣಗಳಿಗೆ ಮತ್ತು ದೇಶದ ಎಲ್ಲೆಡೆ ಒದಗಿಸುವುದು ಸಾಧ್ಯವಾಗಬಹುದು. ತಂತ್ರಜ್ಞಾನ ಹೀಗೆ ಗಾಂಧಿಯವರ ಗ್ರಾಮ ಸ್ವರಾಜ್ಯಕ್ಕೂ ನೆರವಾಗಬಹುದು. ಸ್ಮಾರ್ಟ್ ಸಿಟಿಗಳಿಗಿಂತ, ಸ್ಮಾರ್ಟ್ ಗ್ರಾಮಗಳ ಅವಶ್ಯಕತೆ ಇದೆ.

■



ಗಾಂಧಿ ಎಂದರೆ
ಹಿಮಾಲಯ
ಏರಿದಷ್ಟೂ ಎತ್ತರ
ಅದ ಏರ ಹೋಗಿ
ಜಾರಿ ಬಿದ್ದವರಷ್ಟೋ
ಏರಲಾಗದೆ
ಜರಿದವರೆಷ್ಟೋ..
ಏರಿ ಅರಿವಿನ ಬಿತ್ತರ
ತಿಳಿದವರೆಷ್ಟೋ..

ಗಾಂಧಿ ಎಂದರೆ
ಮಹಾಸಾಗರ
ಇಳಿದಷ್ಟೂ ಆಳ
ತಿಳಿದಷ್ಟೂ ಅಗಾಧ
ಇಳಿಯ ಹೋಗಿ
ಮುಳುಗಿದವರಷ್ಟೋ..
ಆಳಕ್ಕಿಳಿದು
ಮುತ್ತುಗಳ ಹೆಕ್ಕಿ
ತಂದವರೆಷ್ಟೋ..

ಗಾಂಧಿ ಎಂದರೆ
ನೀಲಾಕಾಶ
ಸರಹದ್ದುಗಳಿಲ್ಲದ
ಅನಂತ
ಕಣ್ಣ ಪೊರೆ ಕಳಚಿದರೆ
ಕೋರೈಸುವವು
ಗ್ರಹ ತಾರೆಗಳು
ಕಂಡು ಖುಷಿಯಾದವರೆಷ್ಟೋ
ಕಾಣದೆ ಕರುಬಿದವರೆಷ್ಟೋ

ಗಾಂಧಿ ಎಂದರೆ
ಅದು ಬರಿ ಹೆಸರೆ
ಸತ್ಯದ ಉಸಿರು
ಶಾಂತಿಯ ಬಸಿರು
ತ್ಯಾಗದ ಹಸಿರು
ಅಹಿಂಸೆಯ ಒಸರು.
ತಿಳಿಯಲು ಇದನು
ನಾವು ತಿಳಿಯಾಗಬೇಕು .

ಎ.ಎಂ.ಪಿ ವೀರೇಶಸ್ವಾಮಿ, ಹೊಳಗುಂದಿ.



ಪಾದಯಾತ್ರೆ ದಣಿವು ಮರೆತೇ ಹೋಯಿತು !



– ಆನಂದತೀರ್ಥ ಪ್ಯಾಟಿ

(ಚಿತ್ರಗಳು : ಭರತ್ ಕಂದಕೂರ)

ಇಂಥ ಆತ್ಮೀಯ ಸ್ವಾಗತವನ್ನು ಖಂಡಿತವಾಗಿ ನಾವು ನಿರೀಕ್ಷಿಸಿರಲಿಲ್ಲ!

ನೂರಾರು ಗ್ರಾಮಸ್ಥರು ಸೀಮೆಕಲ್ಲಿನಿಂದ ಊರಿನ ಮುಖ್ಯ ದಾರಿವರೆಗೆ ನಿಂತು, ಸ್ವಾಗತಿಸಿದರು. ಮಕ್ಕಳು ಹೂಗಳನ್ನು ನಮ್ಮ ಮೇಲೆ ಸುರಿಸಿದರು. ದೊಡ್ಡವರು ನೂಲಿನ ಮಾಲೆ ಹಾಕಿ, ಕೈಮುಗಿದರು. ನಸುಕಿನ ಜಾವ ಕೊಪ್ಪಳದ ಅಶೋಕ ಸರ್ಕಲ್'ನಿಂದ ಕಾಮನೂರಿನವರೆಗೆ 18 ಕಿ.ಮೀ ನಡೆದ ಆಯಾಸವೆಲ್ಲ ಗ್ರಾಮಸ್ಥರ ಪ್ರೀತಿಯ ಹೊಳೆಯಲ್ಲಿ ಮರೆತೇ ಹೋಯಿತು.

ಕೊಪ್ಪಳದ ಗಾಂಧಿ ಬಳಗವು ಈ ವರ್ಷ ಗಾಂಧಿ ಜಯಂತಿ ಅಂಗವಾಗಿ ಕಾಮನೂರಿಗೆ ಪಾದಯಾತ್ರೆ ಏರ್ಪಡಿಸಿತ್ತು. ಈ ಊರಿನ ವಿಶೇಷವೆಂದರೆ, ಇಲ್ಲಿ ಹೋಟೆಲುಗಳಿಲ್ಲ; ಬೀಡಿ–ಸಿಗರೇಟ್, ಗುಟಖಾ, ಮದ್ಯ ಮಾರಾಟಕ್ಕೆ ನಿಷೇಧ. ಇದು ಎರಡೂವರೆ ದಶಕಗಳ ಹಿಂದಿನಿಂದಲೂ ಚಾಲ್ತಿಯಲ್ಲಿದೆ (ಈ ಬಗ್ಗೆ 1999ರಲ್ಲಿ ನಾನು ಸಂಯುಕ್ತ ಕರ್ನಾಟಕಕ್ಕೆ ಲೇಖನ ಬರೆದಿದ್ದೆ!)

ಇಂಥ ಹಳ್ಳಿ ಗಾಂಧಿ ಬಳಗದ ಗಮನ ಸೆಳೆದಿದ್ದು ಸಹಜವೇ ಆಗಿತ್ತು. ಅದ್ಭುತ ಸಂಘಟನಾ ಸಾಮರ್ಥ್ಯದ ಪ್ರಾಣೇಶ ಪೂಜಾರ್, ನಾಗರಾಜ ನಾಯಕ ಡೊಳ್ಳಿನ, ಬಸವರಾಜ ಸವಡಿ ಇತರರು ಒಂದೆರಡು ಸಲ ಕಾಮನೂರಿಗೆ ಬಂದು ಗ್ರಾಮಸ್ಥರ





ಸಂಯುಕ್ತ ಕರ್ನಾಟಕ 18-3-1999

ದುಶ್ಚಟಗಳ ವಿರುದ್ಧ ಸಮರ ಹೂಡಿದ ಕಾಮನೂರು

ಬಳಿ ಚರ್ಚಿಸಿದಾಗ ಸಿಕ್ಕ ಸ್ಪಂದನ ಅನುಪಮ!

ನಸುಕಿನ ಜಾವ 5.30ಕ್ಕೆ ಪಾದಯಾತ್ರೆಗೆ ಚಾಲನೆ ನೀಡಿದ್ದು ಮಾಜಿ ಸಂಸದ ಕರಡಿ ಸಂಗಣ್ಣ, ತಹಸೀಲ್ದಾರ್ ವಿಠ್ಠಲ ಚೌಗಲಾ, ನಗರಸಭೆ ಅಧ್ಯಕ್ಷರು. ಒಟ್ಟು 127 ಪಾದಯಾತ್ರಿಗಳು ಕಾಮನೂರು ತಲುಪಿದಾಗ ಬೆಳಿಗ್ಗೆ 9 ಗಂಟೆ. ನಾವೆಲ್ಲ ಊರು ಸಮೀಪಿಸುತ್ತಿದ್ದಂತೆ, ಹಳ್ಳಿಗರು ಸ್ವಾಗತಿಸಿದ ಪರಿ ವಿಸ್ಮಯಗೊಳಿಸಿತು. ರಸ್ತೆಯಲ್ಲಿ ರಂಗೋಲಿ ಹಾಕಲಾಗಿತ್ತು. ಸರ್ಕಾರಿ ಶಾಲೆ ಹಿಂದಿನ ದುರ್ಗಮ್ಮ ದೇಗುಲದಲ್ಲಿ ಊರವರು ಕೂತಿದ್ದರು.

ಸಾವಯವ ಕೃಷಿ, ಸಿರಿಧಾನ್ಯ ಬೇಸಾಯ, ಗೋಸಾಕಾಣಿಕೆ, ಡೇರಿ, ಮೌಲ್ಯವರ್ಧನೆ ಇಲ್ಲಿವೆ. ಇದರ ಜತೆಗೆ, ಮದ್ಯ-ಗುಟಖಾ, ಸಿಗರೇಟ್ ಮಾರಾಟ ಇಲ್ಲಿ ನಿಷೇಧ. "ಇನ್ನೆರಡು ವರ್ಷಗಳಲ್ಲಿ ಈ ನಿರ್ಬಂಧ ಮುರಿಯುತ್ತಿತ್ತೇನೋ? ಆಗಲೇ ಆ ಬಗ್ಗೆ ಗೊಣಗಾಟ ಶುರುವಾಗಿತ್ತು. ನೀವೆಲ್ಲ ಬಂದು, ನಮ್ಮ ನಿಯಮಗಳಿಗೆ ಅಂಗೀಕಾರ ಕೊಟ್ಟಿರಿ. ನಮ್ಮ ದನಿಗೆ ಬಲ ಬಂದಿದೆ" ಎಂದು ಹಿರಿಯರಾದ ದ್ಯಾಮಣ್ಣ ಹೊನ್ನತ್ತಿ ಭಾವುಕರಾದರು. "ಇನ್ನು ನಮ್ಮೂರಲ್ಲಿ ಆ ಬಗ್ಗೆ ಚರ್ಚೆಯೇ ಇರದು ಬಿಡಿ" ಎಂದು ಮಲ್ಲಪ್ಪ ತುಬಾಕಿ ಪ್ರಕಟಿಸಿದರು. ಇಲ್ಲಿಗೆ, ಗಾಂಧಿ ಬಳಗ ಪಾದಯಾತ್ರೆ ಮಾಡಿದ್ದೂ ಸಾರ್ಥಕ ಅನಿಸಿತು.

ಊರಿನ ಹಿರಿಯರು, ಸಾವಯವ ಕೃಷಿಕರು, ಗೋಪಾಲಕರು ಹಾಗೂ ಜನಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು. ಕಾಮನೂರಿನ ವಿಶೇಷತೆ ಬಗ್ಗೆ ತಿಳಿದುಕೊಂಡ ಸಂಸದ ರಾಜಶೇಖರ ಹಿಟ್ನಾಳ, ಬೆಂಗಳೂರಿನಿಂದ ದೂರವಾಣಿ ಮೂಲಕ ಜನರನ್ನು ಉದ್ದೇಶಿಸಿ ಮಾತನಾಡಿ, ಸಂಸದರ ಆದರ್ಶ ಗ್ರಾಮವಾಗಿ ಈ ಊರನ್ನು ದತ್ತು ಪಡೆಯುವುದಾಗಿ ಘೋಷಿಸಿದರು. ಇದರಿಂದಾಗಿ, ಸುಮಾರು 1 ಕೋಟಿ ರೂಪಾಯಿ ವೆಚ್ಚದ ಅಭಿವೃದ್ಧಿ ಯೋಜನೆಗಳು ಇಲ್ಲಿಗೆ ಬರಲಿವೆ.

ಊರಿನವರು ಉಪಾಹಾರ ವ್ಯವಸ್ಥೆ ಮಾಡಿದ್ದರು. ಸುಮಾರು 300 ಜನರು ಎರಡು ತಾಸುಗಳ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳು, ಸ್ಥಳೀಯ ಯುವಕರು, ಶಿಕ್ಷಕರು, ಪಂಚಾಯತ ಸದಸ್ಯರು, ಕೃಷಿಕರು, ಸ್ವಸಹಾಯ ಸಂಘದ ಪ್ರತಿನಿಧಿಗಳು ಉಪಸ್ಥಿತರಿದ್ದರು.


■



ಗಾಂಧಿ....

- **ಜಗತ್ತಿನ 100 ಕ್ಕೂ ಹೆಚ್ಚು ದೇಶಗಳು ಗಾಂಧೀಜಿ ಭಾವಚಿತ್ರ ಇರುವ ಪೋಸ್ಟಲ್ ಸ್ಟಾಂಪ್ ಗಳನ್ನು ಬಿಡುಗಡೆ ಮಾಡಿವೆ. ಮೊಟ್ಟ ಮೊದಲು ಬಿಡುಗಡೆಗೊಳಿಸಿದ ದೇಶ ಪೋಲಂಡ್**
- **ಭಾರತ ಅಂಚೆ ಇಲಾಖೆಯು ಇಲ್ಲಿಯವರೆಗೂ ಗಾಂಧೀಜಿಯ ಭಾವಚಿತ್ರ ಇರುವ ಸುಮಾರು 40 ಕ್ಕೂ ಹೆಚ್ಚು ಸ್ಟಾಂಪ್ ಮತ್ತು 200 ಕ್ಕೂ ಹೆಚ್ಚು ಪೋಸ್ಟಲ್ ಎನ್ವಲಪ್‌ಗಳನ್ನು ಬಿಡುಗಡೆಗೊಳಿಸಿದೆ.**
- **ಸುಮಾರು 40 ಕ್ಕೂ ಹೆಚ್ಚು ದೇಶಗಳು ಗಾಂಧೀಜಿ ಭಾವಚಿತ್ರ ಇರುವ ನಾಣ್ಯಗಳನ್ನು ಬಿಡುಗಡೆಗೊಳಿಸಿವೆ.**
- **ಸುಮಾರು 80 ಕ್ಕೂ ಹೆಚ್ಚು ದೇಶಗಳಲ್ಲಿ ಗಾಂಧೀಜಿಯವರ ವಿವಿಧ ರೀತಿಯ ಪ್ರತಿಮೆಗಳಿವೆ.**
- **ಗಾಂಧೀಜಿಯವರ ಹೆಸರಿನ ರಸ್ತೆಗಳು ಸುಮಾರು 40 ಕ್ಕೂ ಹೆಚ್ಚು ದೇಶಗಳಲ್ಲಿವೆ.**
- **ಗಾಂಧೀಜಿ ಮರಣ ಹೊಂದಿದ ದಿನ ಶ್ರೀಲಂಕಾ ಸರಕಾರವು ಶೋಕಾಚರಣೆ ಮಾಡಿ ತನ್ನ ರೇಡಿಯೋ ಪ್ರಸಾರವನ್ನು 24 ಗಂಟೆಗಳ ಕಾಲ ಬಂದ್ ಮಾಡಿತ್ತು.**
- **ಗಾಂಧೀಜಿಯವರು ಬದುಕಿದ್ದಾಗಲೇ ಅವರ ಜೀವನ ಚರಿತ್ರೆ ನೊಬೆಲ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ರೋಮನ್ ರೋಲ್ಯಾಂಡ್ ಅವರಿಂದ ಬರೆಯಲ್ಪಟ್ಟಿತ್ತು.**
- **ಗಾಂಧೀಜಿಯವರು ತಮ್ಮ ಎರಡೂ ಕೈಗಳಿಂದ ಬರೆಯುತ್ತಿದ್ದರು. 'ಹಿಂದ್ ಸ್ವರಾಜ್' ಪುಸ್ತಕದ ಕೆಲವು ಪುಟಗಳನ್ನು ಎಡಗೈಯಿಂದ ಬರೆದಿದ್ದರು.**
- **ಗಾಂಧೀಜಿಯವರು ತಮ್ಮ ಜೀವಮಾನದಲ್ಲೇ ವಿಮಾನದಲ್ಲಿ ಒಂದು ಸಾರಿಯೂ ಪ್ರಯಾಣಿಸಲಿಲ್ಲ.**
- **ತಮ್ಮ ಸಮಕಾಲೀನ ಜಗತ್ತಿನ ನಾಯಕರಲ್ಲೇ ಅತ್ಯಂತ ಹೆಚ್ಚು ಛಾಯಾಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ ವ್ಯಕ್ತಿ ಗಾಂಧೀಜಿ . ಅವರಷ್ಟು ಹೆಚ್ಚು ಛಾಯಾಚಿತ್ರಗಳಲ್ಲಿ ಒಡಮೂಡಿದ ಇನ್ನೊಬ್ಬ ನಾಯಕ ಯಾರೂ ಇಲ್ಲ .**
- **ತಮ್ಮ ಜೀವಮಾನದಲ್ಲೇ ಒಮ್ಮೆಯೂ ಗಾಂಧೀಜಿ ಅಮೇರಿಕಾಕ್ಕೆ ಭೇಟಿ ನೀಡಲಿಲ್ಲ. ಆದರೆ ಅಮೇರಿಕಾ ಒಂದರಲ್ಲೇ ಗಾಂಧೀಜಿಯವರ 30 ಕ್ಕೂ ಹೆಚ್ಚು ಪ್ರತಿಮೆಗಳಿವೆ.**
- **1999 ರಲ್ಲಿ ಟೈಮ್ಸ್ ಮ್ಯಾಗ್ಜೀನ್ ನಡೆಸಿದ 'ಶತಮಾನದ ವ್ಯಕ್ತಿ' ಸ್ಪರ್ಧೆಯಲ್ಲಿ ಗಾಂಧೀಜಿಗೆ ಎರಡನೇ ಸ್ಥಾನ. ಮೊದಲ ಸ್ಥಾನ ಗಾಂಧೀಜಿಯವರನ್ನು ಬಹುವಾಗಿ ಮೆಚ್ಚಿದ ಅಲ್ಬರ್ಟ್ ಐನಸ್ಟೀನ್.**
- **ಗಾಂಧೀಜಿಯವರಿಗೆ ಮುಂದಿನ ಎರಡು ಹಲ್ಲುಗಳು ಹರೆಯದಲ್ಲೇ ಬಿದ್ದು ಹೋಗಿದ್ದವು. ತಿನ್ನುವುದಕ್ಕಾಗಿ ಎರಡು ಹಲ್ಲುಗಳ ಸೆಟ್ ಒಂದನ್ನು ಮಾಡಿಸಿಕೊಂಡಿದ್ದರು. (ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರಿಂದ ದಾಳಿಗೊಳಗಾದಾಗ ಎರಡು ಹಲ್ಲುಗಳು ಉದುರಿದ್ದವು).**
- **ಅಮೇರಿಕಾದ ಟೈಮ್ ಮ್ಯಾಗ್ಜೀನ್ 1930 ರಲ್ಲಿ 'ವರ್ಷದ ವ್ಯಕ್ತಿ' ಎಂದು ಗಾಂಧೀಜಿಯರನ್ನು ಘೋಷಿಸಿ ಮುಖಪುಟದಲ್ಲಿ ಅವರ ಭಾವಚಿತ್ರ ಪ್ರಕಟಿಸಿತ್ತು. ಪ್ರಥಮ ಬಾರಿಗೆ ಭಾರತೀಯ ನಾಯಕರೊಬ್ಬರ ಫೋಟೋ ಟೈಮ್ ನಿಯತಕಾಲಿಕದಲ್ಲಿ ಪ್ರಕಟವಾಯಿತು . ನಂತರ 1931 ರಲ್ಲಿ ಹಾಗೂ 1947 ರ ಜೂನ್ ತಿಂಗಳಲ್ಲಿ ಗಾಂಧೀಜಿ ಚಿತ್ರ ಮುಖಪುಟದಲ್ಲಿ ಒಟ್ಟು ಮೂರು ಬಾರಿ ಪ್ರಕಟವಾಯಿತು .**

ಗಾಂಧೀಜಿ ಆದರ್ಶಗಳಲ್ಲಿ ಬದುಕಿದ ಲಾಲ್ ಬಹದ್ದೂರ್ ಶಾಸ್ತ್ರಿ..



– ಎನ್.ಜಗದೀಶ್ ಕೊಪ್ಪ


ಗಾಂಧಿ ಜಯಂತಿಯ ದಿನದಂದು ಜನಿಸಿದ ಲಾಲ್ ಬಹದ್ದೂರ್ ಶಾಸ್ತ್ರಿಯವರನ್ನು ನೆಪ ಮಾತ್ರಕ್ಕೆ ಸ್ಮರಿಸುವುದು ಇಂದಿನ ದಿನಗಳಲ್ಲಿ ವಾಡಿಕೆಯಾಗಿದೆ. ಆದರೆ, ಗಾಂಧೀಜಿಯವರಿಗಿಂತ 35 ವರ್ಷ ಕಿರಿಯವರಾಗಿ ಅವರ ಪುತ್ರನ ಹಾಗೆ ಮಹಾತ್ಮನ ಉದಾತ್ತ ಚಿಂತನೆಗಳನ್ನು ಜೀವನಪೂರ್ತಿ ಅಳವಡಿಸಿಕೊಂಡಿದ್ದ ಶಾಸ್ತ್ರಿಯವರ ಬದುಕು, ಸರಳತೆ ಮತ್ತು ಪ್ರಾಮಾಣಿಕತೆ ಗಾಂಧೀಜಿಯವರ ಜೀವನದಷ್ಟೇ ಪ್ರಮುಖವಾದುದು. ಈ ತಲೆಮಾರಿಗೆ ಗಾಂಧೀಯವರ ಜೊತೆ ಲಾಲ್ ಬಹದ್ದೂರ್ ಶಾಸ್ತ್ರಿಯವರನ್ನು ನಾವು ತಲುಪಿಸಬೇಕಿದೆ.

ಮಹಾತ್ಮನ ಜನ್ಮದಿಂದು ಅಂದರೆ, 1904 ಅಕ್ಟೋಬರ್ ಎರಡರಂದು ಉತ್ತರ ಪ್ರದೇಶದ ಮುಗಲ್ ಶರಾಯ್ ನಲ್ಲಿ ಜನಿಸಿದ ಲಾಲ್ ಬಹದ್ದೂರ್ ಶಾಸ್ತ್ರಿಯವರ ಬದುಕು, ಉದಾತ್ತ ಚಿಂತನೆಗಳು ಮತ್ತು ಜೀವನದುದ್ದಕ್ಕೂ ಅಳವಡಿಸಿಕೊಂಡಿದ್ದ ಗಾಂಧೀಜಿಯವರ ಚಿಂತನೆಗಳಿಂದ ನಮಗೆ ಅವರು ಗಾಂಧೀಜಿಯವರ ಉತ್ತರಾಧಿಕಾರಿಯಂತೆ ಗೋಚರಿಸುತ್ತಾರೆ.


1947ರಿಂದ ಸತತ ಹದಿನೇಳು ವರ್ಷ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ ನೆಹರೂ ಅವರು 1962 ರ ಚೀನಾ ಯುದ್ಧದ ನಂತರ ತೀರಾ ಮುಜಗರಕ್ಕೆ ಒಳಗಾದರು. ಡಾ.ರಾಮಮನೋಹರ ಲೋಹಿಯಾ ಮತ್ತು ಆಚಾರ್ಯ ಕೃಪಲಾನಿಯವರು ನೆಹರೂ ಅವರ ಕಾರ್ಯವೈಖರಿಯನ್ನು ಬಹಿರಂಗವಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ರಾಷ್ಟೀಯ ಕಾಂಗ್ರೇಸ್ ಪಕ್ಷದ ಜನಪ್ರಿಯತೆ ಕೂಡ ಕುಸಿಯತೊಡಗಿತು. ಈ ಸಂದರ್ಭದಲ್ಲಿ ನೆಹರೂ ಅವರ ಮನವಿಯ ಮೇರೆಗೆ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಕೆ.ಕಾಮರಾಜ್ ಅವರು 1963 ರ ಅಕ್ಟೋಬರ್ 3 ರಂದು ಹುದ್ದೆಗೆ ರಾಜಿನಾಮೆ ನೀಡಿ ದೆಹಲಿಗೆ ಬಂದು ರಾಷ್ಟೀಯ ಕಾಂಗ್ರೇಸ್ ಪಕ್ಷದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸತೊಡಗಿದರು.

1964 ರ ಮೇ27 ರಂದು ನೆಹರೂ ಅವರು ಹೃದಯಾಘಾತದಿಂದ ನಿಧನ ಹೊಂದಿದರು. ನೆಹರೂ ನಿಧನರಾದ ಕೂಡಲೇ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಹೊಣೆ ಕಾಮರಾಜ್ ಅವರ ಹೆಗಲಿಗೆ ಬಿತ್ತು. ವಾಸ್ತವವಾಗಿ ಕಾಂಗ್ರೇಸ್ ಅಧ್ಯಕ್ಷರಾಗಿದ್ದ ಅವರು ಪ್ರಧಾನಿಯಾಗುವ ಸಾಧ್ಯತೆಗಳು ಹೆಚ್ಚಾಗಿದ್ದವು. ಅವರು ನೆಹರೂ ಸಚಿವ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಗುಲ್ಜಾರಿಲಾಲ್ ನಂದಾ ಅವರನ್ನು ಉಸ್ತುವಾರಿ ಪ್ರಧಾನಿಯನ್ನಾಗಿ ನೇಮಕ ಮಾಡಿ ಪ್ರಧಾನಿ ಹುದ್ದೆಗೆ ನಾಯಕರನ್ನು ಹುಡುಕತೊಡಗಿದರು. ಗುಲ್ಜಾರಿ ಲಾಲ್ ನಂದಾ, ಲಾಲ್ ಬಹದ್ದೂರ್ ಶಾಸ್ತ್ರಿ , ಮುರಾರ್ಜಿ ದೇಸಾಯಿ ಮತ್ತು ಇಂದಿರಾ ಗಾಂಧಿ ಈ ಹೆಸರುಗಳು ಅವರ ಮುಂದೆ ಇದ್ದವು.

ಅತುಲ್ಯ ಘೋಷ್ ನೀವೇ ಪ್ರದಾನಿಯಾಗಿ ಎಂದು ಕಾಮರಾಜರಿಗೆ ಆಹ್ವಾನ ನೀಡಿದಾಗ ' ನನಗೆ ಹಿಂದಿ ಮತ್ತು ಇಂಗ್ಲೀಷ್ ಭಾಷೆ ಬರುವುದಿಲ್ಲ. ಕೇವಲ ಸಂವಹನ







ಲಾಲ್ ಬಹದ್ದೂರ್ ಶಾಸ್ತ್ರಿಯವರ ಜೀವನ ಚಿತ್ರಣ ನೀಡುವ ಈ ಕೃತಿಯನ್ನು ಭಾರತದ ಖ್ಯಾತ ಪತ್ರಕರ್ತ ಮತ್ತು ಲೇಖಕ ಡಿ ಆರ್ ಮಂಕೇಕರ್ ಅವರು ಬರೆದಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆಯ ಹಿರಿಯ ನಿವೃತ್ತ ಅಧಿಕಾರಿ ಎಂ ಕೆ ಕೆಂಪೇಗೌಡರು ಈ ಮೂಲ ಇಂಗ್ಲಿಷ್ ಕೃತಿಯನ್ನು ಬಹಳ ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಆಸಕ್ತರು ಈ ಪುಸ್ತಕವನ್ನು ವಿಸ್ಮಯ ಬುಕ್ ಹೌಸ್ ಮೂಲಕ ಖರೀದಿಸಬಹುದು.

ಸಂಪರ್ಕ ಸಂಖ್ಯೆ : 8050302424

ಭಾಷೆಯಾಗಿ ಮಾತ್ರ ಬಳಸಬಲ್ಲೆ, ಮೇಲಾಗಿ ನಾನೊಬ್ಬ ಅವಿದ್ಯಾವಂತ . ಭಾರತದ ಪ್ರಧಾನಿಯಾಗುವ ವ್ಯಕ್ತಿ ಇಲ್ಲಿನ ರಾಜ್ಯಗಳಷ್ಟೇ ಅಲ್ಲ, ಜಗತ್ತಿನ ಇತರೆ ದೇಶಗಳ ಜೊತೆಗೆ ಸಮರ್ಥವಾಗಿ ಸಂವಹನ ನಡೆಸುವ ಸಾಮರ್ಥ್ಯ ಹೊಂದಿರಬೇಕು' ಎಂದು ಹೇಳುವುದರ ಮೂಲಕ ಭಾರತದ ರಾಜಕಾರಣ ಮತ್ತು ನಾಯಕ ಹೇಗಿರಬೇಕು ಎಂಬುದಕ್ಕೆ ಹೊಸ ವ್ಯಾಖ್ಯಾನವನ್ನು ಬರೆದರು.

ಾಂಗ್ರೆಸ್ ಅಧ್ಯಕ್ಷ ಕಾಮರಾಜ್ ಅವರು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರು ಹಾಗೂ ಸಂಸದೀಯ ಮಂಡಳಿಯ ಎಲ್ಲಾ ಸದಸ್ಯರು ಮತ್ತು ಹಿರಿಯ ನಾಯಕರೊಂದಿಗೆ ಸಮಾಲೋಚಿಸಿ ಪ್ರಾಮಾಣಿಕತೆ, ಸರಳತೆ, ಮಿತಭಾಷಿ ಹಾಗೂ ಪಾರದರ್ಶಕತೆಯ ಜೀವನದಲ್ಲಿ ಗಾಂಧೀಜಿಯವರ ಉತ್ತರಾಧಿಕಾರಿ ಎಂಬಂತೆ ಇದ್ದ ಲಾಲ್ ಬಹುದ್ದೂರ್ ಶಾಸ್ತ್ರೀಯವರನ್ನು ನೆಹರೂ ಉತ್ತರಾಧಿಕಾರಿ ಮತ್ತು ನೂತನ ಪ್ರಧಾನಿಯನ್ನಾಗಿ ನೇಮಕ ಮಾಡಿದರು. ಕಾಮರಾಜರ ಈ ಪ್ರಾಮಾಣಿಕ ನಡೆ ಇಡೀ ದೇಶಾದ್ಯಂತ ಮೆಚ್ಚುಗೆಗೆ ಪಾತ್ರವಾಯಿತು. ಜೊತೆಗೆ ಪಕ್ಷಭೇದ ಮರೆತು ಅವರನ್ನು ಇತರೆ ರಾಷ್ಟ್ರೀಯ ನಾಯಕರು ಗೌರವಿಸತೊಡಗಿದರು.

1964 ರ ಜೂನ್ ತಿಂಗಳಿನಲ್ಲಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಲಾಲ್‌ಬಹದ್ದೂರ್ ಶಾಸ್ತ್ರೀಯವರು ತಮ್ಮ ನಿಷ್ಪಕ್ಷಪಾತ ಗುಣ ಮತ್ತು ಪ್ರಾಮಾಣಿಕತೆಯ ವ್ಯಕ್ತಿತ್ವದ ಮೂಲಕ ಎಲ್ಲರ ಮನಗೆದ್ದರು. ಆಡಳಿತಾರೂಢ ಪಕ್ಷದ ಸದಸ್ಯರಲ್ಲಿ ಇದ್ದ ಭಿನ್ನಮತಗಳು ಕರಗತೊಡಗಿದವು. ನೆಹರೂ ನಿಧನಾನಂತರ ಲಾಲ್ ಬಹದ್ದೂರ್ ಶಾಸ್ತ್ರೀ ಪ್ರಧಾನಿಯಾಗಿ ಕೇವಲ ಒಂದೂವರೆ ವರ್ಷ ಕಾರ್ಯನಿರ್ವಹಿಸಿದರೂ ಸಹ ಅವರು ನೆಹರೂ ಅವರಷ್ಟೇ ಖ್ಯಾತಿಯನ್ನು ಗಳಿಸಿದ್ದು ವಿಶೇಷ. ನೆಹರೂ ನಂತರದ ಸಮರ್ಥ ಪ್ರಧಾನಿ ಎಂಬ ಕೀರ್ತಿಗೆ ಅವರು ಪಾತ್ರರಾದರು. ಕಾಮರಾಜ್ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾ ಶಾಸ್ತ್ರಿಯವರಿಗೆ ಬೆಂಬಲವಾಗಿ ನಿಂತರು.

ಲಾಲ್‌ಬಹದ್ದೂರ್ ಶಾಸ್ತ್ರಿಯವರ ಆಳ್ವಿಕೆಯಲ್ಲಿ ಕಾಮರಾಜ್ ಅವರ ಸಹಕಾರದಿಂದ ಶ್ರೀಲಂಕಾ ಪ್ರಧಾನಿಯಾಗಿದ್ದ ಸಿರಿಮಾವೋ ಭಂಡಾರನಾಯಿಕೆ ಜೊತೆ ಭಾರತ-ಶ್ರೀಲಂಕಾ ಒಪ್ಪಂದ ಏರ್ಪಟ್ಟಿತು. 1964 ರ ಅಕ್ಟೋಬರ್ 30 ರಂದು ನಡೆದ ಈ ಒಪ್ಪಂಧದಲ್ಲಿ ಶ್ರೀಲಂಕಾದಲ್ಲಿ ನೆಲೆಯೂರಿದ್ದ ಭಾರತ ಮೂಲದ ನಾಗರೀಕರಿಗೆ ವಿಶೇಷವಾಗಿ ತಮಿಳು ನಾಗರೀಕರಿಗೆ ಸ್ಥಳೀಯ ಸಿಂಹಳ ರಾಷ್ಟ್ರೀಯ ವಾದಿಗಳಿಂದ ಯಾವುದೇ ತೊಂದರೆಯಾಗಬಾರದು ಮತ್ತು ಅವರಿಗೆ ಅಲ್ಲಿನ ನಾಗರೀಕತೆಯನ್ನು ನೀಡಬೇಕೆಂದು ಸಹಮತಕ್ಕೆ ಬರಲಾಯಿತು. ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಅಲ್ಲಿನ ಚಹಾ ತೋಟಗಳಲ್ಲಿ ದುಡಿಯಲು ಹೋಗಿದ್ದ ತಮಿಳು ಕಾರ್ಮಿಕರು ಅಲ್ಲಿಯೇ ಶಾಶ್ವತವಾಗಿ ನೆಲೆ ನಿಂತಿದ್ದರು. ಈ ಸಮಸ್ಯೆಯನ್ನು ಕಾಮರಾಜರು ಮಧ್ಯವರ್ತಿಯಾಗಿ ನಿಂತು ಬಗೆಹರಿಸಿದ್ದು ಅವರ ಕುರಿತಾಗಿ ತಮಿಳರಲ್ಲಿ ಅಪಾರ ಗೌರವ ಉಂಟಾಯಿತು.

ಈ ನಡುವೆ 1965 ರ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ನೆರೆಯ ಪಾಕಿಸ್ತಾನ ರಾಷ್ಟ್ರವು ಭಾರತದ ಜಮ್ಮು ಕಾಶ್ಮೀರದ ಕೇಂದ್ರಾಳಿತ ಪ್ರದೇಶಕ್ಕೆ ಶಸ್ತ್ರಸಜ್ಜಿತ ಭಯೋತ್ಪಾದಕರನ್ನು ಕಳುಹಿಸಿ ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಬೇಕೆಂಬ ಗಲಭೆ ಎಬ್ಬಿಸುವುದರ ಮೂಲಕ ಹಿಂಸಾಚಾರಕ್ಕೆ ನಾಂದಿಯಾಡಿತು. ಈ ಸಂದರ್ಭದಲ್ಲಿ ಶಾಸ್ತ್ರಿಯವರು ಆಗಸ್ಟ್ ತಿಂಗಳಿನಲ್ಲಿ ಪಾಕಿಸ್ತಾನದ ಮೇಲೆ ಯುದ್ಧವನ್ನು ಘೋಷಿಸಿದರು. ಹದಿನೇಳು ದಿನಗಳ ಕಾಲ ನಡೆದ ಯುದ್ಧದಲ್ಲಿ ಪಾಕಿಸ್ತಾನಕ್ಕೆ ಅಪಾರ ಸಾವುನೋವುಗಳು ಉಂಟಾದವು. ಸಂಯುಕ್ತ ರಾಷ್ಟಗಳ ಮಧ್ಯಸ್ತಿಕೆಯಿಂದ (ವಿಶ್ವ ಸಂಸ್ಥೆ) 1966 ರ ಜನವರಿ 10 ರಂದು ಅಂದಿನ ರಷ್ಯಾ ದೇಶದ ತಾಷ್ಕೆಂಟ್ ನಗರದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಪಾಕ್ ಅಧ್ಯಕ್ಷ ಅಯೂಬ್‌ಖಾನ್ ನಡುವೆ ಕದನ ವಿರಾಮದ ಒಪ್ಪಂಧ ಏರ್ಪಟ್ಟಿತು. ಭಾರತದ ಪಾಲಿನ ದುರಂತವೆಂಬಂತೆ ಅಂದು ತಾಷ್ಕೆಂಟ್ ನಗರದಲ್ಲಿ ತಂಗಿದ್ದ ಶಾಸ್ತ್ರಿಯವರು ಬೆಳಗಿನ ಎರಡು ಗಂಟೆಯ ಸಮಯದಲ್ಲಿ ತೀವ್ರ ಹೃದಯಾಘಾತಕ್ಕೆ ತುತ್ತಾಗಿ ಅಲ್ಲಿಯೇ ಅಸುನೀಗಿದರು.

ರಾಜಕಾರಣದಲ್ಲಿದ್ದರೂ ಸಹ ಗಾಂಧೀಜಿಯವರ ಚಿಂತನೆಗಳನ್ನು ತಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಂಡು ಅವರಂತೆ ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಯ ಬದುಕನ್ನು ಬದುಕಿದ ಮಹನೀಯರಲ್ಲಿ ಶಾಸ್ತ್ರಿ ಮತ್ತು ಕೆ.ಕಾಮರಾಜ್ ಬಹು ಮುಖ್ಯರಾದವರು. ■

ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತ
ಪ್ರೊ . ಶಿವರಾಜ್



ಜಿ ಬಿ ಶಿವರಾಜ್ ತುಮಕೂರು ಜಿಲ್ಲೆಯ ತುರುವೆಕೆರೆ ತಾಲ್ಲೂಕು ಗೊಟ್ಟಿಕೆರೆ ಊರಿನವರು. ಕೃಷಿಕ ಕುಟುಂಬದಲ್ಲಿ ಜನನ. (01. 02 . 1951) ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯಲ್ಲಿ ರಾಜ್ಯ ಶಾಸ್ತ್ರ ಎಂ. ಎ. ಸ್ನಾತಕೋತ್ತರ ಪದವಿಧರರು .



ಶ್ರೀ ಆದಿಚುಂಚನಗಿರಿ ಪದವಿ ಕಾಲೇಜು, ಚನ್ನರಾಯಪಟ್ಟಣ, ಶಿವಮೊಗ್ಗದ ಕಮಲಾ ನೆಹರು ಕಾಲೇಜು ಹಾಗು ಬೆಂಗಳೂರಿನ ಆರ್ ಬಿ ಎನ್ ಎಂ ಕಾಲೇಜುಗಳಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ ವೃತ್ತಿ ಜೀವನದುದ್ದಕ್ಕೂ ವಿದ್ಯಾರ್ಥಿಗಳಲ್ಲಿ ಗಾಂಧಿ ವಿಚಾರಧಾರೆಯನ್ನು ರೂಪಿಸುವಲ್ಲಿ ಶ್ರಮಿಸಿದ್ದಾರೆ .

ಗಾಂಧಿ ಆಚಾರ ಮತ್ತು ವಿಚಾರಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ಇವರು ಅತ್ಯುತ್ತಮ ವಾಗ್ಮಿ ಕೂಡಾ ಹೌದು . ನಾಡಿನ ಹಲವಾರು ಪ್ರತಿಷ್ಠಿತ ಸಂಘ ಸಂಸ್ಥೆಗಳು ,ವಿಶ್ವ ವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಇವರು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ನೂರಾರು ಗಾಂಧಿ ವಿಚಾರ ಕುರಿತ ಉಪನ್ಯಾಸಗಳನ್ನು ನೀಡಿದ್ದಾರೆ .

ರಾಷ್ಟ್ರೀಯ ಸೇವಾ ಯೋಜನೆ ಇವರ ಆಸಕ್ತಿಯ ಕಾರ್ಯಕ್ಷೇತ್ರ . ತಮ್ಮ ಉಪನ್ಯಾಸಕ ವೃತ್ತಿ ಜೀವನದಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ನೂರಾರು ರಾಷ್ಟ್ರೀಯ ಸೇವಾ ಯೋಜನಾ ಶಿಬಿರಗಳನ್ನು ಸಂಘಟಿಸಿದ್ದಾರೆ. ಎನ್ ಎಸ್ ಎಸ್ ಕಾರ್ಯಕ್ರಮ ಅಧಿಕಾರಿ ಉಪನ್ಯಾಸಕರಿಗೆ ಎನ್ ಎಸ್ ಎಸ್ ಶಿಬಿರಗಳ ಸಂಘಟನಾ ಕೌಶಲ್ಯ ತರಬೇತಿ ಕಾರ್ಯಾಗಾರಗಳನ್ನು ನಡೆಸಿ ಕೊಟ್ಟಿದ್ದಾರೆ. ಗಾಂಧಿ, ಅಂಬೇಡ್ಕರ್, ಲೋಹಿಯಾ, ವಿನೋಬಾ, ವಿವೇಕಾನಂದರ ಚಿಂತನೆಗಳ ನೂರಾರು ಉಪನ್ಯಾಸ ಮಾಲಿಕೆಗಳನ್ನು ಎನ್ ಎಸ್ ಎಸ್ ಗಾಗಿ ಸಂಘಟಿಸಿದ್ದಾರೆ.

ಗಾಂಧಿ ಪ್ರಣೀತ ಪ್ರಮುಖ ರಾಷ್ಟ್ರೀಯ ಸಂಸ್ಥೆಗಳಲ್ಲಿ ಸದಸ್ಯತ್ವ :

- ಆಡಳಿತ ಮಂಡಳಿ ಸದಸ್ಯರು, ಕೇಂದ್ರೀಯ ಗಾಂಧಿ ಸ್ಮಾರಕ ನಿಧಿ, ನವದೆಹಲಿ.
- ಟ್ರಸ್ಟಿ, ಕಸ್ತೂರ್ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಇಂದೋರ್, ಮಧ್ಯಪ್ರದೇಶ.
- ಟ್ರಸ್ಟಿ, ವಿಶ್ವನೀಡಂ ಟ್ರಸ್ಟ್, ಬೆಂಗಳೂರು.
- ನಿರ್ದೇಶಕರು, ಕಾರ್ಯಕ್ರಮಗಳು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಸಾಮಾನ್ಯವಾಗಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಜೀವನ ಪರಿಚಯ ಮತ್ತು ಶ್ರಮದಾನಗಳು ಪ್ರಧಾನವಾಗಿರುತ್ತಿದ್ದವು . ಈ ಅಂಶಗಳ ಜೊತೆಗೆ ಗಾಂಧಿ ವಿಚಾರಧಾರೆಯನ್ನು ಎನ್ ಎಸ್ ಎಸ್ ಕಾರ್ಯಕ್ರಮಗಳಲ್ಲಿ ಪ್ರಧಾನ ಅಂಶವನ್ನಾಗಿ ಸಂಯೋಜಿಸಿದ ಶ್ರೇಯಸ್ಸು ಜಿ ಬಿ ಶಿವರಾಜುರವರಿಗೆ ಸಲ್ಲುತ್ತದೆ. ಇವರ ಸಲಹೆ ಮತ್ತು ಮಾರ್ಗದರ್ಶನದಂತೆ ಈಗ ಈಗ ಎನ್ ಎಸ್ ಎಸ್ ಕಾರ್ಯಕ್ರಮಗಳಲ್ಲಿ ಗಾಂಧಿ ವಿಚಾರ ಧಾರೆಯ ಉಪನ್ಯಾಸಗಳು , ಗಾಂಧಿ ಕಿರುಸಾಹಿತ್ಯ ಪುಸ್ತಕಗಳ ವಿತರಣೆ , ಮತ್ತು ಗಾಂಧಿ ಸಾಕ್ಷ್ಯಚಿತ್ರ ಪ್ರದರ್ಶನಗಳು ಪ್ರಮುಖ ಸ್ಥಾನ ಪಡೆದುಕೊಂಡಿವೆ .

ಈ ನಿಟ್ಟಿನಲ್ಲಿ ಇವರು ಇನ್ನೂ ಮುಂದುವರಿದು ಎನ್ ಎಸ್ ಎಸ್ ಶಿಬಿರಗಳನ್ನು ಸಂಘಟಿಸಿ ನಡೆಸುವ ಗುರುತರ ಜವಾಬ್ದಾರಿಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಗೆ ವಹಿಸಿ ಸರ್ಕಾರೀ ಆದೇಶ ಹೊರಡಿಸಲು ಸಹ ಕಾರಣರಾಗಿದ್ದಾರೆ . ಕಳೆದ ಎರಡು ವರ್ಷಗಳಿಂದ ಎನ್ ಎಸ್ ಎಸ್ ಶಿಬಿರಗಳ ಸಂಘಟನೆಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯೇ ನಿರ್ವಹಿಸುತ್ತಿದ್ದು ಇದಕ್ಕೆ ಅಗತ್ಯವಾದ ವಾರ್ಷಿಕ ಇಪ್ಪತ್ತು ಲಕ್ಷ ರೂಗಳ ಅನುದಾನ ಕೂಡಾ ಸರ್ಕಾರದಿಂದ ಗಾಂಧಿ ಸ್ಮಾರಕ ನಿಧಿಗೆ ಬರುತ್ತಿದೆ. ಇವರ ಪ್ರೇರಣೆಯಿಂದಾಗಿ ಈಗ ಎನ್ ಎಸ್ ಎಸ್ ಶಿಬಿರಗಳಲ್ಲಿ ಗಾಂಧಿ ಕುರಿತ ಉಪನ್ಯಾಸ ,ಪುಸ್ತಕ ವಿತರಣೆ , ಕಿರುಚಿತ್ರ ಪ್ರದರ್ಶನ ಮತ್ತು ಗಾಂಧೀಜಿಯವರಿಗೆ ಪ್ರಿಯವಾಗಿದ್ದ ಶ್ರಮದಾನ ಕಾರ್ಯಕ್ರಮಗಳು ಕಡ್ಡಾಯವಾಗಿದ್ದು ವಿದ್ಯಾರ್ಥಿ ಹಾಗೂ ಯುವ ಸಮುದಾಯಕ್ಕೆ ಗಾಂಧೀಜಿಯವರು ಹೆಚ್ಚು ಹೆಚ್ಚು ಪರಿಚಿತರಾಗುತ್ತಿದ್ದಾರೆ.

ಗಾಂಧಿ ವಿಚಾರ ಧಾರೆಯ ಮಾರ್ಗದಲ್ಲಿ ಜಿ ಬಿ ಶಿವರಾಜು ಅವರದ್ದು ಮುವ್ವತ್ತಕ್ಕೂ ಹೆಚ್ಚು ವರ್ಷಗಳ ಪಯಣ . ಖಾದಿ ಜುಬ್ಬಾ ಮತ್ತು ಖಾದಿ ಪ್ಯಾಂಟ್ ಇವರ ಸರಳ ಉಡುಗೆ. ಮದ್ಯಪಾನ ವಿರೋಧಿ ಆಂದೋಲನದ ರೂವಾರಿಯಾಗಿ ಮದ್ಯಪಾನ ಸಂಯಮ ಮಂಡಳಿ ಜೊತೆ ನಿಕಟವಾಗಿ ಕಾರ್ಯ ನಿರ್ವಹಿಸಿದ್ದಾರೆ . ತಮ್ಮ ನಿವೃತ್ತ ಜೀವನದ ಪಿಂಚಣಿ ಹಣವನ್ನು ಖರ್ಚು ಮಾಡಿಕೊಂಡು ಕರ್ನಾಟಕದಾದ್ಯಂತ ಗಾಂಧಿ ವಿಚಾರಗಳನ್ನು ಯುವಜನರಿಗೆ ತಲುಪಿಸಲು ಈಗಲೂ ಅವಿರತ ಪ್ರಯತ್ನ ನಡೆಸುತ್ತಿದ್ದಾರೆ .

ಇವರ ಅವಿರತ ಸೇವೆ ಮತ್ತು ಮಾರ್ಗದರ್ಶನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕಸ್ತೂರ್ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ , ಗಾಂಧಿ ಸಾಹಿತ್ಯ ಸಂಘ, ವಿಶ್ವ ನೀಡಂ ಟ್ರಸ್ಟ್ , ಸರ್ವೋದಯ ಮಂಡಲ ,ಇತ್ಯಾದಿ ಗಾಂಧಿ ಪ್ರಣೀತ ಸಂಘಟನೆಗಳು ಮರು ಚೇತನಗೊಳ್ಳುತ್ತಿವೆ .

ಕರ್ನಾಟಕ ಗಾಂಧಿ ಸ್ಮಾರಕ ನಿಧಿ :

ಜಿ ಬಿ ಶಿವರಾಜುರವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ 2011ರಿಂದ 2017 ರವರೆಗೆ ಆರು ವರ್ಷಗಳ ಕಾಲ ರಾಜ್ಯದಲ್ಲಿ ಗಾಂಧಿ ವಿಚಾರಗಳನ್ನು ಯುವಜನರಿಗೆ ತಲುಪಿಸುವ ನಿಟ್ಟಿನಲ್ಲಿ ಅಪಾರ ಕೊಡುಗೆ ನೀಡಿದ್ದಾರೆ . ಕಾಲೇಜು ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಜೊತೆ ಸಂಯೋಜಿಸಿ ಗಾಂಧಿ ವಿಚಾರಗಳನ್ನು ವಿದ್ಯಾರ್ಥಿ ಸಮುದಾಯಕ್ಕೆ ವಿಸ್ತರಿಸಿದ ಇವರ ವಿಶಿಷ್ಟ ಮಾದರಿ ಈಗ ದೇಶಾದ್ಯಂತ ಗಮನ ಸೆಳೆದಿದೆ. ಮಹಾತ್ಮ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಎನ್ ಎಸ್ ಎಸ್ ಶಿಬಿರಗಳಲ್ಲಿ ಅಳವಡಿಸಿ ಪ್ರೇರಕ ಕಾರ್ಯಕ್ರಮಗಳ ಮೂಲಕ ಯುವಜನರನ್ನು ಗಾಂಧಿ ವಿಚಾರಗಳಿಗೆ ಒಗ್ಗಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಲವು ವರ್ಷಗಳ ಹಿಂದೆ ಗಾಂಧಿ ಅನುಯಾಯಿಗಳು ಮತ್ತು ಗಾಂಧಿ ವಿಚಾರಗಳ ಬಗ್ಗೆ ಆಸಕ್ತಿ ಇದ್ದವರಿಗೆ ಮಾತ್ರ ಪರಿಚಿತ ಸಂಸ್ಥೆಯಾಗಿತ್ತು. ಹೋ . ಶ್ರೀನಿವಾಸಯ್ಯನವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅದರ ಗೌರವ ಕಾರ್ಯದರ್ಶಿಯಾಗಿ ಜಿ ಬಿ ಶಿವರಾಜುರವರು 2011 ರಲ್ಲಿ ನೇಮಕಗೊಂಡ ನಂತರ ಗಾಂಧಿ ಭವನದ ಚಿತ್ರಣವೇ ಬದಲಾಯಿತು. ಎನ್ ಎಸ್ ಎಸ್ ಕಾರ್ಯಕ್ರಮಗಳ ಸಂಯೋಜನೆ ; ವಾರ್ತಾ ಇಲಾಖೆಯ ಸಹಯೋಗ , ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಸಹಭಾಗಿತ್ವ ,ಗಾಂಧಿ ಪ್ರಣೀತ ಸಂಘ ಸಂಸ್ಥೆಗಳ ಸಮನ್ವಯ ಹೀಗೆ ಹಲವಾರು ಸಂಘ ಸಂಸ್ಥೆಗಳನ್ನು ಜೊತೆಗೂಡಿಸಿ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಗಾಂಧಿ ಸ್ಮಾರಕ ನಿಧಿಯ ಚಟುವಟಿಕೆಗಳನ್ನು ಚುರುಕುಗೊಳಿಸಿ ವಿಸ್ತರಿಸಿದ್ದಾರೆ .

ಹಿಂದಿನ ಹಲವಾರು ಮುಖ್ಯಮಂತ್ರಿಗಳು ಆಸಕ್ತಿ ವಹಿಸಿ ಗಾಂಧಿ ಸ್ಮಾರಕ ನಿಧಿ ಸಂಸ್ಥೆಗೆ ಸಾಕಷ್ಟು ಆರ್ಥಿಕ ಮತ್ತು ನೈತಿಕ ನೆರವು ನೀಡಿದ್ದಾರೆ . ಈ ರೀತಿ ಸರ್ಕಾರದ ವಿಶ್ವಾಸ ಗಳಿಸಿ ಆರ್ಥಿಕ ನೆರವು ಪಡೆಯುವಲ್ಲಿ ಗಾಂಧಿಭವನದ ಅಧ್ಯಕ್ಷರಾಗಿದ್ದ ಹೋ ಶ್ರೀನಿವಾಸಯ್ಯ ಮತ್ತು ಗೌರವ ಕಾರ್ಯದರ್ಶಿಗಳಾಗಿದ್ದ ಜಿ ಬಿ ಶಿವರಾಜುರವರ ಪಾತ್ರವು ಮಹತ್ತರವಾಗಿತ್ತು .

ಅರಸೀಕೆರೆಯ ಕಸ್ತೂರ್ ಬಾ ಗಾಂಧಿ ಆಶ್ರಮದ ಪುನರುಜ್ಜೀವನ :

ಮಹಾತ್ಮ ಗಾಂಧೀಜಿಯವರ ನೇರ ಮಾರ್ಗದರ್ಶನದಲ್ಲಿ ತರಬೇತಿ ಪಡೆದು ಕರ್ನಾಟಕದ ಕಸ್ತೂರ್ ಬಾ ಗಾಂಧಿ ಎಂದೇ ಹೆಸರಾಗಿದ್ದ ಯಶೋದರಮ್ಮ ದಾಸಪ್ಪ ಅವರು ಕರ್ನಾಟಕದ ಅರಸೀಕೆರೆಯಲ್ಲಿ 1949 ರಲ್ಲಿ ಕಸ್ತೂರ್ ಬಾ ಗಾಂಧಿ ಆಶ್ರಮವನ್ನು ಸ್ಥಾಪಿಸಿದರು .ಮುವ್ವತ್ತು ವರ್ಷಗಳ ಕಾಲ ಇವರ ನೇತೃತ್ವದಲ್ಲಿ ಕಸ್ತೂರ್ ಬಾ ಗಾಂಧಿ ಟ್ರಸ್ಟ್ ಚಟುವಟಿಕೆಯಿಂದ ಕೂಡಿತ್ತು . ಯಶೋದರಮ್ಮನವರು 1980ರಲ್ಲಿ ನಿಧನರಾದ ನಂತರ ಕರ್ನಾಟಕದಲ್ಲಿ ಕಸ್ತೂರ್ ಬಾ ಗಾಂಧಿ ಸ್ಮಾರಕ ಟ್ರಸ್ಟ್ ನ ಚಟುವಟಿಕೆಗಳು ಸೂಕ್ತ ಮಾರ್ಗದರ್ಶನ ಮತ್ತು ನೇತ್ರತ್ವವಿಲ್ಲದೆ ಸೊರಗಿ ಹೋಗಿದ್ದವು .

ಜಿ ಬಿ ಶಿವರಾಜುರವರು 2011 ರಲ್ಲಿ ಕಸ್ತೂರ್ ಬಾ ಗಾಂಧಿ ಟ್ರಸ್ಟ್ ನ ಸದಸ್ಯರಾದ ನಂತರ ಅಲ್ಲಿನ ಚಿತ್ರಣವೂ ಬದಲಾಗಿದೆ. ಇವರು ಅರಸೀಕೆರೆಯ ಕಸ್ತೂರ್ ಬಾ ಗಾಂಧಿ ಆಶ್ರಮವನ್ನು ದೇಶದ ಗಮನ ಸೆಳೆಯುವಂತೆ ಪುನರುಜ್ಜೀವನಗೊಳಿಸಿ ದ್ದಾರೆ. ಇದು ಗಾಂಧಿ ವಿಚಾರ ಧಾರೆಯ ಮಾರ್ಗದಲ್ಲಿ ಶಿವರಾಜುರವರ ಹೆಗ್ಗುರುತಾಗಿದೆ.

ಅರಸೀಕೆರೆಯಲ್ಲಿನ ಎಂಬತ್ತೈದು ಎಕರೆ ವಿಸ್ತೀರ್ಣದ ಕಸ್ತೂರ್ ಬಾ ಗಾಂಧಿ ಆಶ್ರಮದಲ್ಲಿ ಗಾಂಧಿ ಪ್ರಣೀತ ಚಟುವಟಿಕೆಗಳು ಇವರ ಮಾರ್ಗದರ್ಶನದಲ್ಲಿ ಪುನರುಜ್ಜೀವನಗೊಂಡಿವೆ .

ಅರಸೀಕೆರೆಯ ಕಸ್ತೂರ್ ಬಾ ಆಶ್ರಮದಲ್ಲಿ 1948 ರಲ್ಲೇ ಪ್ರತಿಷ್ಠಾಪಿಸಿದ್ದ ಗಾಂಧೀಜಿಯವರ ಚಿತಾಭಸ್ಮದ ಸ್ಥಳ ಸೂಕ್ತ ಪ್ರಚಾರ ಮತ್ತು ಸಂರಕ್ಷಣೆಯಿಲ್ಲದೆ ಜನರ ಮನಸ್ಸಿನಿಂದ ಮಸುಕಾಗಿ ಹೋಗಿತ್ತು . ಜಿ ಬಿ ಶಿವರಾಜು ಅವರು ಉದಾತ್ತ ದಾನಿಗಳ ನೆರವಿನಿಂದ ಈ ಚಿತಾಭಸ್ಮ ಇರುವ ಸ್ಥಳವನ್ನು ನವದೆಹಲಿಯ ಗಾಂದೀಜಿ ಸಮಾಧಿ ರಾಜಘಾಟ್ ಮಾದರಿಯಲ್ಲಿ ಪುನರ್ ನಿರ್ಮಿಸಿದ್ದಾರೆ . ಈ ಸ್ಥಳ ಈಗ ' ಕರ್ನಾಟಕದ ರಾಜಘಾಟ್ ' ಎಂದೇ ರಾಷ್ಟ್ರಮಟ್ಟದಲ್ಲಿ ಹೆಸರಾಗಿದೆ.

ದಾನಿಗಳು ಮತ್ತು ಸಂಘ ಸಂಸ್ಥೆಗಳ ನೆರವಿನಿಂದ ಅರಸೀಕೆರೆಯ ಕಸ್ತೂರ್ ಬಾ ಗಾಂಧಿ ಆಶ್ರಮದಲ್ಲಿ ಇವರು ರೂಪಿಸಿರುವ ' ಗಾಂಧಿ ಶಿಲ್ಪವನ ' ಈಗ ಪ್ರವಾಸಿ ತಾಣವಾಗಿದೆ . ಇವರ ಮಾರ್ಗದರ್ಶನದಂತೆ 2017 ರಲ್ಲಿ ಆರಂಭಿಸಿರುವ ಕಸ್ತೂರ್ ಬಾ ಗಾಂಧಿ ಅನಾಥ ಹೆಣ್ಣು ಮಕ್ಕಳ ವಸತಿ ಗೃಹದಲ್ಲಿ ಮುವ್ವತ್ತು ಹೆಣ್ಣು ಮಕ್ಕಳಿದ್ದು ಸರ್ಕಾರೀ ಶಾಲೆಗಳಲ್ಲಿ ಕಲಿಯುತ್ತಿವೆ .ಅರಸೀಕೆರೆಯ ಕಸ್ತೂರ್ ಬಾ ಗಾಂಧಿ ಆಶ್ರಮದ ಪುನರುಜ್ಜೀವನಕ್ಕಾಗಿ ಕರ್ನಾಟಕ ಸರ್ಕಾರದಿಂದ 2017 ರಲ್ಲಿ ಎರಡು ಕೋಟಿ ರೂಗಳ ಆರ್ಥಿಕ ನೆರವು ಪಡೆಯುವಲ್ಲಿ ಶಿವರಾಜ್ ರವರ ಪಾತ್ರ ಪ್ರಮುಖವಾಗಿದೆ.

ಈ ಆರ್ಥಿಕ ನೆರವನ್ನು ಬಳಸಿ ಕಸ್ತೂರ್ ಬಾ ಆಶ್ರಮದ ಆವರಣದಲ್ಲಿ ಹೊರಾಂಗಣ ಸಭಾಭವನ ನಿರ್ಮಿಸಲಾಗಿದೆ. ಶಿಥಿಲವಾಗಿದ್ದ ಹಳೆಯ ಕಟ್ಟಡಗಳನ್ನು ಸುಭದ್ರಗೊಳಿಸಿ ಮುಂದಿನ ಪೀಳಿಗೆಗೆ ಸಂರಕ್ಷಿಸಲಾಗಿದೆ. ಈ ಕಟ್ಟಡದಲ್ಲಿ ಈಗ ಗಾಂಧಿ ವಿಚಾರ ಧಾರೆಯ ಅಧ್ಯಯನ ಶಿಬಿರಗಳು ,ಎನ್ ಎಸ್ ಎಸ್ ಶಿಬಿರಗಳು ಮತ್ತು ಕಾರ್ಯಾಗಾರಗಳು ಶಿವರಾಜುರವರ ಮಾರ್ಗದರ್ಶನದಲ್ಲಿ ನಡೆಯುತ್ತಿವೆ.

ಮೂಡಿಗೆರೆಯ 'ಭಾರತಿ ಬೈಲ್ ' ಕೇಂದ್ರದ ಅಭಿವೃದ್ಧಿ :

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಸಮೀಪದ ಭಾರತೀ ಬೈಲ್ ನಲ್ಲಿ ದಿವಂಗತ ಯಶೋದರಮ್ಮ ದಾಸಪ್ಪ ಅವರು ಐವತ್ತರ ದಶಕದಲ್ಲಿ ಸ್ಥಾಪಿಸಿದ್ದ ಮಹಿಳೆಯರ ಮತ್ತು ಮಕ್ಕಳ ಕೇಂದ್ರವು ಈಗ ಶಿವರಾಜುರವರ ನೇತೃತ್ವದಲ್ಲಿ ಪುನಃ ಚೈತನ್ಯಗೊಂಡಿದೆ.

ಈ ಕೇಂದ್ರದ ಅಭಿವೃದ್ಧಿಗಾಗಿ ಗ್ರಾಮದ ಜನರ ಮನವೊಲಿಸಿ ಒಂದು ಸ್ಥಳೀಯ ಸಮಿತಿಯನ್ನು ರಚಿಸಲಾಗಿದ್ದು ಇಲ್ಲಿನ ಚಟುವಟಿಕೆಗಳು ಈಗ ಚುರುಕುಗೊಂಡಿವೆ . ಕಸ್ತೂರ್ ಬಾ ಟ್ರಸ್ಟ್ ಗೆ ಸೇರಿದ್ದ ನಾಲ್ಕು ಎಕರೆ ಜಮೀನಿಗೆ ಈಗ ತಂತಿ ಬೇಲಿ ಹಾಕಿ ಒತ್ತುವರಿಯಿಂದ ರಕ್ಷಿಸಲಾಗಿದೆ.

ಮಾರ್ನೋಮಿದೊಡ್ಡಿ ಕೇಂದ್ರ ಪುನಶ್ಚೇತನ :

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಮಾರ್ನೋಮಿ ದೊಡ್ಡಿ ಗ್ರಾಮದಲ್ಲಿನ ಕಸ್ತೂರ್ ಬಾ ಗಾಂಧಿ ಟ್ರಸ್ಟ್ ನ ಉಪ ಕೇಂದ್ರವನ್ನು ಸ್ಥಳೀಯ ಜನರ ಸಹಕಾರದಿಂದ ಪುನಶ್ಚೇತನಗೊಳಿಸಲಾಗುತ್ತಿದೆ. ಶಿಥಿಲಗೊಂಡಿದ್ದ ಬಾಲವಾಡಿ ಕಟ್ಟಡವನ್ನು ಕೆಡವಿ ಅಲ್ಲಿ ಗ್ರಾಮೀಣ ಮಹಿಳೆಯರಿಗಾಗಿ ಸ್ವ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಕಾರ್ಯಾಗಾರ



ಕೇಂದ್ರವನ್ನು (work shed) ನಿರ್ಮಿಸಲು ಪ್ರಯತ್ನಗಳು ನಡೆದಿವೆ. ಇದರ ನಿರ್ಮಾಣಕ್ಕಾಗಿ ಜಿ ಬಿ ಶಿವರಾಜುರವರು ತಮ್ಮ ಪರಿಚಿತ ಸಂಸ್ಥೆಯ ಮೂಲಕ ಹತ್ತು ಲಕ್ಷ ರೂಗಳ ಕಾರ್ಪೊರೇಟ್ ಸಹಾಯ ನಿಧಿಯನ್ನು ಟ್ರಸ್ಟ್ ಗೆ ಕೊಡುಗೆಯಾಗಿ ತಂದಿದ್ದಾರೆ .

ಮಾರ್ನೋಮಿ ದೊಡ್ಡಿ ಗ್ರಾಮದ ಸುತ್ತ ಮುತ್ತ ಕಸ್ತೂರ್ ಬಾ ಟ್ರಸ್ಟ್ ಗೆ ಸೇರಿರುವ ಇಪ್ಪತ್ತು ಎಕರೆಗೂ ಹೆಚ್ಚು ನೀರಾವರಿ ಸೌಕರ್ಯವಿರುವ ಕೃಷಿ ಜಮೀನನ್ನು ರೈತ ಮುಖಂಡರಾದ ಸುನಂದಾ ಜಯರಾಮ್ ಅವರ ನೇತೃತ್ವದ ಸ್ಥಳೀಯ ಸಮಿತಿಯ ಮೂಲಕ ಅಭಿವೃದ್ಧಿಗೊಳಿಸಲಾಗುತ್ತಿದೆ.

ಮಾನಸಗಂಗೋತ್ರಿಯಲ್ಲಿ ಸಬರಮತಿ ಮಾದರಿಯ ಆಶ್ರಮ ನಿರ್ಮಾಣ :


ಮೈಸೂರು ವಿಶ್ವವಿದ್ಯಾಲಯದ ಅಂದಿನ ಉಪಕುಲಪತಿಗಳ ಮನ ಒಲಿಸಿ ಮಾನಸ ಗಂಗೋತ್ರಿಯ ಗಾಂಧಿ ಭವನದ ಆವರಣದಲ್ಲಿ ಸಬರಮತಿ ಆಶ್ರಮದ ಮಾದರಿಯ ಆಶ್ರಮ ಕಟ್ಟಡ ನಿರ್ಮಾಣಕ್ಕೆ ಶಿವರಾಜುರವರೇ ಮೂಲ ಪ್ರೇರಕರಾಗಿದ್ದಾರೆ . ಈ ಆಶ್ರಮದ ವಿಶಾಲ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಶಿಲ್ಪಕಲಾ ಅಕಾಡೆಮಿಯ ನೆರವಿನಿಂದ ' ಗಾಂಧಿ ಶಿಲ್ಪವನ 'ವನ್ನು ನಿರ್ಮಿಸಲಾಗಿದೆ.

ಗದಗದಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಸಬರಮತಿ ಮಾದರಿ ಆಶ್ರಮ ನಿರ್ಮಾಣ :

ಮೈಸೂರಿನ ಮಾನಸಗಂಗೋತ್ರಿಯಲ್ಲಿ ನಿರ್ಮಾಣವಾಗಿದ್ದ ಸಬರಮತಿ ಆಶ್ರಮದ ಮಾದರಿಯನ್ನು ಅಂದಿನ ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದ ಎಚ್ ಕೆ ಪಾಟೀಲ್ ಅವರಿಗೆ ತೋರಿಸಿ ಗದಗದಲ್ಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿ ಕೂಡಾ ಸಬರಮತಿ ಮಾದರಿಯ ಆಶ್ರಮ ನಿರ್ಮಾಣವಾಗಲು ಜಿ ಬಿ ಶಿವರಾಜುರವರೇ ಪ್ರೇರಕ ಶಕ್ತಿಯಾಗಿದ್ದಾರೆ . ಹಲವು ವಿಶ್ವ ವಿದ್ಯಾಲಯಗಳ ಒಡನಾಟದಲ್ಲಿ ಅಲ್ಲಿನ ಗಾಂಧಿ ಭವನಗಳು , ಗಾಂಧಿ ಅಧ್ಯಯನ ಕೇಂದ್ರಗಳು ಮತ್ತು ಕಾಲೇಜುಗಳ ಸಹಯೋಗದಲ್ಲಿ ರಾಷ್ಟ್ರಮಟ್ಟದ ಮತ್ತು ರಾಜ್ಯ ಮಟ್ಟದ ಹಲವಾರು ಗಾಂಧಿ ಅಧ್ಯಯನ ಶಿಬಿರಗಳನ್ನು ಇವರು ತಮ್ಮ ಸಂಚಾಲಕತ್ವದಲ್ಲಿ ಯಶಸ್ವಿಗೊಳಿಸಿದ್ದಾರೆ.

ಜನ ಸಮುದಾಯದಲ್ಲಿ ಮತ್ತು ವಿಶೇಷವಾಗಿ ಯುವ ಜನರಲ್ಲಿ ಗಾಂಧಿ ಚಿಂತನೆಗಳನ್ನು ಬಿತ್ತುವ ಕಾಯಕದಲ್ಲಿ ಇವರು ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ . ■

ಕವಿಗಳು ಕಂಡ ಬಾಪು



ನಿನಗಿಂತ ಹಿರಿಯರನು ಕಾಣೆ ಮಹಾತ್ಮ
ಮಿತಿಮೀರಿ ಏರಿರುವೆ, ಬಾಳಿಗೆ ದಕ್ಕದೆ ಮೀರಿರುವೆ
ಲೋಕವನೆ ದಹಿಸಿರುವ ಸೂರ್ಯನಿಗೆ ತಡೆಯಾಗಿ
ನಿನ್ನ ಕೊಡೆ ನೆತ್ತಿಯನು ಕಾಯುತಿರಲಿ.

– ಕೆ.ಎಸ್. ನಿಸಾರ್ ಅಹಮದ್

ಮೂಲಭಕ್ತಿಯಲ್ಲಿ ಭಕ್ತ, ದೀನದಲಿತರಲ್ಲಿ ರಕ್ತ
ಭವದ ನೂರು ಎಳೆತ ಸೆಳೆತದಲ್ಲಿ ಕಲ್ಲಿನೊಲು ವಿರಕ್ತ
ಜರಿದವನನು ಹರಸಬಲ್ಲ, ಇರಿದವನನು ಉಳಿಸಬಲ್ಲ
ತಾನೆ ಬೆಂದು ತಾನೆ ನೊಂದು ಅರಿಯದೆಯನು ಅರಸಬಲ್ಲ
ನೀ ಮಹಾತ್ಮನು

– ಗೋಪಾಲಕೃಷ್ಣ ಅಡಿಗ

ನೂರಾರು ವರ್ಷಕ್ಕೆ ಸಾವಿರಕ್ಕೆ ಎರಡಕ್ಕೆ
ಅಲ್ಲಿ ಯೇಸ ಕ್ರಿಸ್ತ, ಇಲ್ಲೆಮ್ಮ ಸಿದ್ಧಾರ್ಥ
ಆದಿಜಿನಪುತ್ರ, ಸುಭ್ರಾತೃ ಬಾಹುಬಲಿಯಂತೆ
ಭೂಮಿಗತಿಶಯದಂತೆ
ಸಗ್ಗದಿದರೆಂಬಂತೆ
ಒಲವನೊಲವಿಗೆ ನೀವು ತಿರುಗಿಸಿದಿರಿ
ಕ್ಷಮೆಗೆ ಹಿರಿತ್ಯಾಗಕ್ಕೆ ತೇದಿರೊಡಲ

– ವೀ ಸೀತಾರಾಮಯ್ಯ

ನಿನಗೇಕೆ ಸ್ಮಾರಕವು
ಶಿಲ್ಪಕೃತಿ ಹೂಮಾಲೆ?
ಲೋಕವನೆ ಬೆಳಗುತಿದೆ
ನಿನ್ನ ಎಲುಬಿನ ಜ್ವಾಲೆ!

– ದಿನಕರ ದೇಸಾಯಿ

ಒಂದೆ ಹಿಡಿಮೂಳೆ ಚಕ್ಕಳ ಅಷ್ಟೆ; ಅದಕೆ ಸುರಿ
ಮೂರೋ ನಾಲ್ಕು ಚಮಚ ರಕ್ತ, ಮಾಂಸ
ಜೊತೆಗಿರಿಸು ನೆರೆಕೊರೆದ ಕಡಲಿನಾಳದ ಮನಸ
ಒಳಗಿರಿಸು ಹಿಮಗಿರಿಯ ಮೀರಿ ನಿಮಿರ್ದ ಹಿರಿಯಾತ್ಮವ
ಹಚ್ಚು ಮೊರಕಿವಿಯೆರಡ, ಎರಡು ಪಿಳಿಪಿಳಿ ಕಣ್ಣ
ನೆರೆಬಂದ ಕಡಲಿನೊಳ್ ಪ್ರೇಮವಂ ತುಂಬಿದೆದೆಯ.
.... ಚಿಂದಿಯಲಿ ಸುತ್ತಿ, ಸೆಳೆ ಬೊಂಬಿನಾ
ಲಂಬವನಿತ್ತು ಬಿಡಿಸುತ್ತಾ! ಅವನೆ ಕಾಣ್! ಲೋಕತಾರಕ ಬಾಪೂ!'

– ಜಿ ಪಿ ರಾಜರತ್ನಂ

ಯೇಸುಕ್ರಿಸ್ತನುತ್ತೇಮಹಸ್ತೇಜವಾಂತು ಬಂತು
ಬುದ್ಧನೆದೆಯ ಉದ್ಬುದ್ಧನೀತಿ ಹಿಂಸೆಯನು ತಳ್ಳಿನಿಂತು
ಗಾಂಧೀರೂಪ ಅಪರೂಪ ದೀಪ ಭಾರತವ ಬೆಳಗಿತಿಂತು

– ಚೆನ್ನವೀರ ಕಣವಿ

ಇಂದ್ರಿಯಂಗಳ ಜಹಿಸಿ ಚಿತ್ತಶುದ್ಧಿಯ ಬಯಸಿ
ಲೋಭಮಂ ತ್ಯಜಿಸಿ, ರೋಷವ ವರ್ಜಿಸಿ, ಸರ್ವಸಖ್ಯವ
ಭಜಿಸಿ, ತೃಪ್ತಿಯನಭ್ಯಸಿಸಿ ಸತ್ಯಪಾಲನೆಯೊಂದ
ಮನದೊಳರಿಸಿ, ಕಾಯಕಷ್ಟವ ಸಹಿಸಿ, ವೈರಿಗನಾಮಂ ಕ್ಷಮಿಸಿ
ಸರ್ವಸಮತೆಯ ಗಳಿಸಿ, ಶಮವನರಿಸಿ, ಸ್ವಾತ್ಮ ಶಿಕ್ಷಣವೇ
ಸ್ವರಾಜ್ಯವೆನ್ನುತ ವಚಿಸಿ... ದೈವ ಸಂಪನ್ಮಾರ್ಗದರ್ಶಕಂ
ಗಾಂಧಿಯಲ್ತೆ

– ಡಿ ವಿ ಗುಂಡಪ್ಪ

ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕೋ ಅದರಿಚ್ಛೆ ಹಾದಿ
ಇದಕೋ ಅದು ಹರಿದತ್ತ ಬೀದಿ
ಕೆರೆಬಾವಿ ಕೊಳ ಕಂಡೂ ಕಾಣದೊಲೆ
ಗಿಡಗುಲ್ಮ ತೆವರು ತಿಟ್ಟು;
ಎನ್ನದಿದಕೊಂದು ನಿಟ್ಟು
ಹರಿದತ್ತ ಹರಿಯ ಚಿತ್ತ
ಈ ಧೀರ ನಡೆವನತ್ತ.
ಇದ ನೋಡಿ ನಾನು ನೆನೆವನಿಂದು
ಇಂಥ ನೆಳಲೇ ಗಾಂಧಿಯೆಂದು

– ಪು ತಿ ನರಸಿಂಹಾಚಾರ್

ನಿನ್ನ ತ್ಯಾಗ, ಬಲಿದಾನಕ್ಕೆ
ನಾವಿತ್ತ ಬೆಲೆಗೊತ್ತೇ?
ನಿನ್ನ ಜಯಂತಿ ನೆನೆಸಿ
ಊರಿಗೊಂದು 'ಗಾಂಧಿಭವನ' ನಿಲಿಸಲಿದ್ದೇವೆ
ಸ್ಮಾರಕನಿಧಿ ವಾಚನಾಲಯದಲ್ಲಿ
ನಿನ್ನ ಬಗೆಗನೇಕ ಪುಸ್ತಕಗಳನ್ನೊಟ್ಟಿದ್ದೇವೆ.
ಅಲ್ಲೊಂದು ಇಲ್ಲೊಂದು ಪ್ರತಿಮೆ ಹುಗಿದು
ನಿನ್ನನ್ನ ಅಮರಗೊಳಿಸಿದ್ದೇವೆ

– ಸಿದ್ಧಲಿಂಗ ಪಟ್ಟಣಶೆಟ್ಟಿ

ಮನೆಯ ಅಂಗಳದಲ್ಲಿ
ಕರುಣೆಯ ಸಸಿ ನೆಟ್ಟವನು
ಒಂದು ನೂಲಿನ ಎಳೆಯ
ತುದಿಯಿಂದ ಸ್ವಾತಂತ್ರ್ಯ
ತೂಗುಬಿಟ್ಟವನು.
ಕುದಿವ ಎದೆಯೊಳಗೊಮ್ಮೆ
ಕತ್ತಲೆಯು ಕವಿದಾಗ
ಎಡವಿ ಬೀಳದ ಹಾಗೆ
ಗುಡಿಸಲಿನ ಮುಂದೊಂದು ದೀಪ
ಹಚ್ಚಿಟ್ಟವನು.

– ಸು ರಂ ಎಕ್ಕುಂಡಿ

ಇವನು ಕಲ್ಲಿನಲಿ ರೊಟ್ಟಿ ಮಾಡಿಲ್ಲ, ಹುಲ್ಲಿನಲಿ
ನಿಶಿತಾಸ್ತ್ರವನು ಮಂತ್ರದಿಂದ ರಚಿಸಿ ದಾನವನ
ಕೊಂದಿಲ್ಲ; ಅರ್ಧನರ ಅರ್ಧಮೃಗ ರೂಪದಲಿ
ಕಂಭವನೊಡೆದು ಗುಡುಗುಡಿಸಿ ಮೂಡಿದವನಲ್ಲ!
ದಶಶಿರನ ಕೊಂದಿಲ್ಲ; ಚಕ್ರಧರನೂ ಅಲ್ಲ
ಅದ್ಭುತ ಪವಾಡಗಳ, ಅಘಟಿತ ವಿಚಿತ್ರಗಳ
ಗೋಜಿಗವನೆಂದಿಗೂ ಹೋಗುವಾತನೇ ಅಲ್ಲ!
ಮತ್ತಾವ ದೇವತ್ವ ವೀಕ್ಷಣೆಗೆ ನೆರೆದಿಹರ್ ಇನಿತು ಮನುವಂಶಜರ್?

– ಕುವೆಂಪು

ಸಾಕ್ರಟೀಸ್ ಆತ್ಮವೀರ
ಕುಡಿದನಲ್ಲಿ ವಿಷದ ನೀರ
ಧೀರ ಕ್ರೈಸ್ತ ಇದ್ದನೆಲ್ಲಿ?
ಅವನ ದೇಹ ಸಿಲುಬೆಯಲ್ಲಿ
ನ್ಯಾಯದೊಂದು ನೆನಪ ಮಾಡಿ
ವಿಚಾರಣೆಯ ಆಟ ಆಡಿ
ಕೊಂದರಾಗ ಧೂರ್ತರು.
ಅದೂ ಬೇಡವಾಯ್ತೆ ಇಲ್ಲಿ?
ಮುಗಿಸಿದರೋ ಮೂರ್ಖರು

– ದ ರಾ ಬೇಂದ್ರೆ

ಕಾವಿಯುಡಲಿಲ್ಲ; ಹೆಣ್ಣು ಬಿಡಲಿಲ್ಲ
ಎಲ್ಲೋ ಮರದೊಳಗೆ ಕೂತು ರಹಸ್ಯವಾಗಿ
ಜಪಮಣಿ ಎಣಿಸಿ ಸಮಾಧಿಸ್ಥನಾಗಲಿಲ್ಲ
ತೆರೆದ ಬಯಲಿನ ಕೆಳಗೆ ಎಲ್ಲರ ಜೊತೆಗೆ ಕೂತು
ಭಜನೆ ಮಾಡಿದೆ
ಸಬಕೋ ಸನ್ಮತಿ ದೇ ಭಗವಾನ್
ಪವಾಡಗಳನ್ನು ತೋರಿಸಿ ಯಾರನ್ನೂ ಮರಳು ಮಾಡಲಿಲ್ಲ,
ಮಾಡಿದ್ದೇ ಪವಾಡದ ತಲೆ ಮೆಟ್ಟಿತು
ಕತ್ತಿಕೋವಿ ಹಿಡಿಯಲಿಲ್ಲ
ಆದರೂ ಯದ್ಧ ಮಾಡಿದೆ
ಎಲ್ಲವನ್ನೂ ಕಟ್ಟಿಕೊಂಡೆ
ಆದರೂ ಏಕಾಂಗಿಯಾಗಿಯೇ ತೋರಿದೆ
ನೋಡುವುದಕ್ಕೆ ಏಕಾಂಗಿಯಾದರೂ ಜನಗಣಮನ
ಅಧಿನಾಯಕನಾಗಿ ನಡೆದೆ

– ಡಾ. ಜಿ ಎಸ್ ಶಿವರುದ್ರಪ್ಪ

ಚಿ|ತ್ರಾ|ವ|ಳಿ

ಶೇಷಾದ್ರಿಪುರಂ ಕಾಲೇಜಿನ ಎನ್ ಎಸ್ ಎಸ್ ವಿದ್ಯಾರ್ಥಿಗಳು ಅಕ್ಟೋಬರ್ 1 ರಂದು ಗಾಂಧಿ ಭವನದ ಆವರಣದಲ್ಲಿ ಶ್ರಮದಾನ ಮಾಡಿದರು ..





ಜಾಗತಿಕ ಶಾಂತಿಯೆಡೆಗೆ ಗಾಂಧಿಪಥ " ಎನ್ನುವ ಒಂದು ದಿನದ ವಿಚಾರ ಸಂಕಿರಣ ಸೆಪ್ಟೆಂಬರ್ 24ರಂದು ನಡೆಯಿತು . ಅಳಂದ ಶಾಸಕ ಮತ್ತು ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರಾದ ಬಿ ಆರ್ ಪಾಟೀಲ್ ಅವರು ಸಂಕಿರಣ ಉದ್ಘಾಟಿಸಿದರು . ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಸದಸ್ಯರಾದ ಅಬಿದಾ ಬೇಗಂ , ಗಾಂಧಿ ಅನುಯಾಯಿ ನೇತಾಜಿ ಗಾಂಧಿ ಅವರು ಸಮಾರಂಭದಲ್ಲಿದ್ದರು .



ಅಂತರ ಜಾತಿ ವಿವಾಹವಾದ ಗಾಂಧಿ ಭವನದ ಸಂಯೋಜಕ ತನುಜ್ ಆರಾಧ್ಯ ಮತ್ತು ಯಶೋದಾ ದಂಪತಿಗಳಿಗೆ ಮುಖ್ಯ ಮಂತ್ರಿಗಳು ಹಾಗೂ ಗಣ್ಯರು ಆಶೀರ್ವದಿಸಿದರು

ಗಾಂಧಿ ಭವನದಲ್ಲಿ ಗಾಂಧಿ ಜಯಂತಿ ...



ಕರ್ನಾಟಕ ಸರ್ಕಾರ ಪ್ರಥಮ ಬಾರಿಗೆ ಗಾಂಧಿ ನಡಿಗೆ ಕಾರ್ಯಕ್ರಮವನ್ನು ಗಾಂಧಿ ಭವನದಿಂದ ವಿಧಾನಸೌಧದವರೆಗೆ ಹಮ್ಮಿಕೊಂಡಿತ್ತು . ಮುಖ್ಯಮಂತ್ರಿ ಸಿದ್ದರಾಮಯ್ಯನವರು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್, ಕಾನೂನು ಹಾಗೂ ಸಂಸದೀಯ ಸಚಿವರಾದ ಎಚ್ ಕೆ ಪಾಟೀಲ್ , ಮಾಜಿ ಮುಖ್ಯಮಂತ್ರಿ ಎಂ ವೀರಪ್ಪ ಮೊಯಿಲಿ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ವೂಡೇ ಪಿ ಕೃಷ್ಣ ಗಾಂಧಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗಾಂಧಿ ನಡಿಗೆಗೆ ಚಾಲನೆ ನೀಡಿದರು ..







ಆನಂದರಾವ್ ವೃತ್ತದಿಂದ ಗಾಂಧಿ ಭವನದವರೆಗೆ ವಿದ್ಯಾರ್ಥಿಗಳಿಂದ ಸದ್ಭಾವನಾ ಯಾತ್ರೆ ಏರ್ಪಡಿಸಲಾಗಿತ್ತು .



ಮಹಾತ್ಮ ಗಾಂಧಿ ಮತ್ತು ಮಾಜಿ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ..



ಜಿಲ್ಲಾ ಗಾಂಧಿ ಭವನಗಳ ನಿರ್ಮಾಣ ಮತ್ತು ವಾರ್ಷಿಕ ನಿರ್ವಹಣೆಗಳಿಗೆ ಅನುದಾನ ನೀಡುವಂತೆ
ಮುಖ್ಯ ಮಂತ್ರಿಗಳಿಗೆ ಮನವಿ ಪತ್ರ ನೀಡಲಾಯಿತು .



ಜಯಶ್ರೀ ಟ್ರಸ್ಟ್ ವತಿಯಿಂದ ನಟರಾಜ್ ಹುಳಿಯಾರ್ ಅವರ ' ಎಲ್ಲರ ಗಾಂಧೀಜಿ '
ಪುಸ್ತಕಕ್ಕೆ ಅತ್ಯುತ್ತಮ ಗಾಂಧಿ ಪುಸ್ತಕ ಬಹುಮಾನ ನೀಡಲಾಯಿತು .



ರಾಜ್ಯ ಎನ್ ಎಸ್ ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಅವರಿಗೆ ಯುವ ಪ್ರಶಸ್ತಿ ಪ್ರಧಾನ ಮಾಡಲಾಯಿತು .



ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ – 2024 ಪುರಸ್ಕೃತರಾದ ಪ್ರೊ . ಜಿ ಬಿ ಶಿವರಾಜ್ ಅವರಿಗೆ ಸನ್ಮಾನಿಸಲಾಯಿತು .



ಮುಖ್ಯ ಅತಿಥಿಗಳಾಗಿದ್ದ ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರಾದ ಎಚ್ ಕೆ ಪಾಟೀಲ್ ಅವರಿಗೆ ಚರಕ ಪ್ರತಿಕೃತಿ ನೀಡಿ ಸ್ವಾಗತಿಸಲಾಯಿತು .



ಮಾನ್ಯ ಮುಖ್ಯಮಂತ್ರಿಗಳಿಗೆ ಚರಕ ಪ್ರತಿಕೃತಿ ನೀಡಿ ಸ್ವಾಗತಿಸಲಾಯಿತು .



ಬೆಂಗಳೂರಿನ ರಾಮ್ ಚೆಲ್ಲಾ ನಾರಾಯಣ್ ಕಾಲೇಜಿನ ಆಸಕ್ತ ವಿದ್ಯಾರ್ಥಿಗಳು ಗಾಂಧಿ ಭವನಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು .

"ಬಿಚ್ಚಿಕೊಳ್ಳುವ ಗಾಂಧಿ, ದ್ವೀಪವಾಗುವ ನಾವು"





'ಗಾಂಧಿ' ಎನ್ನುವುದನ್ನು ಈಗ ಕೇವಲ ರೂಪಕ ಅಥವಾ ಸಂಕೇತದಂತೆ ಬಳಸಲಾಗುತ್ತದೆ. ಅಂದರೆ ಖಾದಿ, ಚರಕಾ, ಅಹಿಂಸೆ, ಬಡವರ ಉದ್ಧಾರ ಇತ್ಯಾದಿ..

ಆದರೆ ಗಾಂಧೀಜಿ ಅಂದರೆ ಅದಷ್ಟೇ ಅಲ್ಲ. ತುಂಬಾ ಸಂಕೀರ್ಣ ವ್ಯಕ್ತಿತ್ವ ಅವರದು. ಅವರು ಹೆಚ್ಚು ಒತ್ತು ಕೊಡುತ್ತಿದ್ದುದೇ ನೈತಿಕತೆಗೆ.

ಗಾಂಧೀಜಿ ನನಗೆ ಅರ್ಥವಾಗಿದ್ದು ತಡವಾಗಿ. ಯುವಕನಾಗಿದ್ದಾಗ ಎಲ್ಲರಿಗೂ ಅನಿಸುವಂತೆ ನನಗೂ 'ಈ ಗಾಂಧಿ ಸರಿಯಿಲ್ಲವೇನೋ' ಎಂದು ಭಾಸವಾಗುತ್ತಿತ್ತು. ಒಂದರ್ಥದಲ್ಲಿ ಅವರು ಬರೀ ಆದರ್ಶ ಅನಿಸುತ್ತಿತ್ತು. ಬಳಿಕ ಕೆ.ವಿ. ಸುಬ್ಬಣ್ಣ, ಯು.ಆರ್. ಅನಂತಮೂರ್ತಿ ಇತರರು ಗಾಂಧೀಜಿ ಬಗ್ಗೆ ಮತ್ತೆ ಮತ್ತೆ ಮಾತಾಡುವುದು, ಬರೆಯುವುದನ್ನು ಗಮನಿಸಿದಾಗ- ಗಾಂಧಿ ಎಂದರೆ ಪರ್ಯಾಯವಾದ ಒಂದು ವ್ಯವಸ್ಥೆ; ಇದರಲ್ಲೇನೋ ಸತ್ವವಿದೆ ಎನಿಸಿತು.

ಜಾಗತೀಕರಣ ಎನ್ನುವ ಪರಿಕಲ್ಪನೆಗೆ ಅನೇಕ ವಿವರಣೆಗಳನ್ನು ಕೊಡಬಹುದು. ಜಾಗತೀಕರಣದಿಂದ ಉಂಟಾಗುವ ಅಡ್ಡ ಪರಿಣಾಮಗಳೂ ಹಲವು. ಇದರಿಂದ ಸಮಾಜ ಪಾರಾಗುವುದು ಹೇಗೆ ಎಂದು ಯೋಚಿಸಿದಾಗ ಉತ್ತರರೂಪವಾಗಿ ನನಗೆ ಕಾಣಿಸಿದ್ದು ಗಾಂಧೀವಾದ. ಹಾಗಾಗಿ ಗಾಂಧೀಜಿಯನ್ನು ಹೆಚ್ಚು ಹೆಚ್ಚು ಅರ್ಥ ಮಾಡಿಕೊಳ್ಳಲು ಶುರು ಮಾಡಿದೆ. ಜಾಗತೀಕರಣ ಅಂದರೆ ಇಡೀ ಪ್ರಪಂಚಕ್ಕೆ ಅನ್ವಯ ಆಗುವಂಥದ್ದು ಎಂಬರ್ಥವಿದೆ. ಆದರೆ ಗಾಂಧೀಜಿಯದ್ದು ಇದಕ್ಕೆ ವ್ಯತಿರಿಕ್ತ ನಿಲುವು. 'ಪ್ರತಿ ಸಮುದಾಯ, ಗ್ರಾಮಕ್ಕೂ ಅದರದ್ದೇ ಆದ ಸ್ವತಂತ್ರ ವ್ಯವಸ್ಥೆ ಇರಬೇಕು' ಎನ್ನುವುದು ಅವರ ಪ್ರತಿಪಾದನೆಯಾಗಿತ್ತು.

ಒಂದು ರಾಜ್ಯ (ದೇಶ) ಹೇಗಿರಬೇಕು? ಗಾಂಧೀಜಿ ಪ್ರಕಾರ, ಸಿಂಹದಂತೆ ಅಲ್ಲ ; ಮುಳ್ಳುಹಂದಿ ತರಹ ಇರಬೇಕು. ಸಿಂಹ ಇತರ ಪ್ರಾಣಿಗಳ ಮೇಲೆ ದಾಳಿ ಮಾಡುವ ಸ್ವಭಾವ ಹೊಂದಿದೆ. ಆದರೆ ಮೈತುಂಬ ಮುಳ್ಳುಗಳನ್ನು ಹೊಂದಿದ್ದರೂ ಮುಳ್ಳುಹಂದಿ ದಾಳಿಕೋರ ಗುಣವನ್ನು ಹೊಂದಿಲ್ಲ. ಬೇರೆ ಪ್ರಾಣಿಗಳಿಗೂ ಅದನ್ನು ಕಚ್ಚಲು ಸಾಧ್ಯವಿಲ್ಲ. ಗ್ರಾಮಗಳು ಹೀಗೆಯೇ ಇರಬೇಕು. ಯಾರಿಗೂ ಕೇಡುಕನ್ನು ಬಯಸದೇ, ಹಾನಿಯುಂಟು ಮಾಡದೇ ಸಣ್ಣ ಸಣ್ಣ ಸ್ವಾವಲಂಬಿ ಘಟಕಗಳಾಗಿ ಬೆಳೆಯುವ ಹಳ್ಳಿಗಳಿಂದ ಇಡೀ ರಾಜ್ಯ, ದೇಶ ಹಾಗೂ ವಿಶ್ವವನ್ನು ಕಟ್ಟುವ ವ್ಯವಸ್ಥೆಯು ಈಗಿರುವ ಸ್ಥಿತಿಗಿಂತ ಹೆಚ್ಚು ಬಲಿಷ್ಠವಾಗಿರುತ್ತದೆ. ಆದರೆ ಈ ಪರ್ಯಾಯ ವ್ಯವಸ್ಥೆ ನಿರ್ಮಾಣ ಮಾಡಲು ಇಂದಿನ ನಾಗರಿಕ ಜಗತ್ತು ಅವಕಾಶ ಮಾಡಿಕೊಡುತ್ತದೆಯೇ ? ಇದು ನನ್ನನ್ನು ಕಾಡುತ್ತಿರುವ ದೊಡ್ಡ ಆತಂಕ.

ಜಾಗತೀಕರಣ ತಂದಿಟ್ಟ ದುಷ್ಪರಿಣಾಮವೇ ನಾನು 'ಕೂರ್ಮಾವತಾರ' ಸಿನಿಮಾ ಮಾಡಲು ಪ್ರೇರಣೆಯಾಗಿದೆ. ಈ ದುಷ್ಪರಿಣಾಮಗಳಿಗೆ ಗಾಂಧೀವಾದದಲ್ಲಿ ಸಮರ್ಥ ಪರಿಹಾರವಿದೆ.

ನೈತಿಕತೆಯ ಅಗ್ನಿಪರೀಕ್ಷೆ..

ಇವತ್ತು ನಾವು ಮುಖ ಮಾಡಿರುವುದು ಜಾಗತೀಕರಣದ ಕಡೆಗೆ. ಬೇಕಿರಲಿ, ಬೇಡವಿರಲಿ, ಎಲ್ಲವನ್ನೂ ಖರೀದಿಸಿ ಮನೆಗೆ ಹೊತ್ತು ತಂದುಹಾಕುವ ಕೊಳ್ಳುಬಾಕತನ ಎಲ್ಲೆಡೆಯೂ ವ್ಯಾಪಿಸಿದೆ. ಆದರೆ ಅದಕ್ಕೆ ವಿರುದ್ಧವಾಗಿರುವ ನಡೆಯನ್ನು ಗಾಂಧೀಜಿ ನಮಗೆ ತೋರಿಸಿಕೊಟ್ಟಿದ್ದಾರೆ.

ಪದಾರ್ಥವೊಂದರ ಬಗ್ಗೆ ವಿಪರೀತ ಪ್ರಚಾರ, ಇನ್ನೊಬ್ಬರ ಮೇಲೆ ಆಕ್ರಮಣ ಮಾಡಿ ನಮ್ಮತನವನ್ನು ಮೆರೆಸುವುದು ಸರಿಯಲ್ಲ ಎನ್ನುವುದು ಅವರ ಅಭಿಮತ. ಕೊಳ್ಳುಬಾಕತನಕ್ಕೆ ವ್ಯತಿರಿಕ್ತವೆನಿಸುವ ವಾದ ಅವರದು. ತೀರಾ ಅಗತ್ಯವಾಗಿ ಬೇಕೆನಿಸಿದ್ದನ್ನು ಮಾತ್ರ ಬಳಸಬೇಕು ಎನ್ನುವುದು ಗಾಂಧೀಜಿ ನಂಬಿಕೆ.

ಆದರೆ ಅದರ ಬಗ್ಗೆ ನಾವು ಯೋಚಿಸುತ್ತಲೇ ಇಲ್ಲ. ಗಾಂಧೀಜಿಯನ್ನು ಕೆಲವು ರೂಪಕಗಳಿಗೆ ಸೀಮಿತ ಮಾಡಿ ಬಿಟ್ಟಿದ್ದೇವೆ. ಅವರು ಹೆಚ್ಚು ಒತ್ತು ಕೊಡುತ್ತಿದ್ದುದು ನೈತಿಕತೆಗೆ. ಏನೇ ಕೆಲಸ ಮಾಡಿದರೂ ಅದರಲ್ಲಿ ನೈತಿಕತೆ

ಇರಬೇಕು ಅನ್ನುತ್ತಿದ್ದರು. ಅದನ್ನೀಗ ನಾವು ಗಾಳಿಗೆ ತೂರಿದ್ದೇವೆ. ಒಂದೆಡೆ ಗಾಂಧೀಜಿಯನ್ನು ನೆನಪಿಸಿಕೊಳ್ಳುತ್ತ, ಇನ್ನೊಂದೆಡೆ ಅವರ ನಡೆಗೆ ವಿರುದ್ಧವಾಗಿ ಸಾಗುತ್ತಿದ್ದೇವೆ. ಇದು ನನ್ನ ಗೊಂದಲವೂ ಹೌದು; 'ಕೂರ್ಮಾವತಾರ'ದ ಆನಂದರಾವ್‌ನ ಗೊಂದಲವೂ..

ಉದಾಹರಣೆಗೆ,

ಮಗ ಹಣ ಕೇಳಿದಾಗ ಆನಂದರಾವ್ ಕೊಡುವುದಿಲ್ಲ. ಮಗ ಎಷ್ಟೇ ಹಟ ಮಾಡಿದರೂ ಹಣ ಕೊಡಲು ಸಾಧ್ಯವೇ ಇಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತಾನೆ. 'ಅಷ್ಟೆಲ್ಲ ದುಡ್ಡು ಏಕೆ ಬೇಕು' ಎಂಬ ಪ್ರಶ್ನೆ ಆನಂದರಾವ್‌ನದು. ಆದರೆ ಮಗ ಬಂಧಿತನಾದಾಗ, ಮೊಮ್ಮಗನ ನೆಮ್ಮದಿಗಾಗಿ ಆತನನ್ನು ಬಿಡಿಸಿಕೊಂಡು ಬರುತ್ತಾನೆ. ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧಗಳು ಹಾಗೂ ಪಾಲಿಸಬೇಕಾದ ಆದರ್ಶಗಳು ಒಟ್ಟಿಗೇ ಹೋಗುತ್ತಿಲ್ಲ. ಇವೆರಡೂ ಒಟ್ಟಿಗೇ ಸಾಗುವ ಹಾಗೆ ಸಮಾಜ ಇರಬೇಕಿತ್ತು. ಇದೊಂದು ವೈರುಧ್ಯ.

ಗಾಂಧೀವಾದವನ್ನು ಎಲ್ಲರೂ ಪಾಲಿಸಬಹುದಾದ ಸಾಧ್ಯತೆ ಇದೆ.

ಆದರೆ ಈಗ ಅದು ಯುಟೋಪಿಯನ್ ಆಗಿ ಕಾಣಿಸುತ್ತಿದೆ. ಇದು ನನ್ನ ಆತಂಕ. ಗಾಂಧೀಜಿಯನ್ನು ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಆದರೆ ನಮಗೆ ಏನೇನೋ ಬೇಕು.

ಗಾಂಧಿ ಬಗ್ಗೆ ಮಾತಾಡುವವರೆಲ್ಲ ಇದೇ ಗೊಂದಲಕ್ಕೆ ಸಿಲುಕಿದ್ದಾರೆ ! ಹಾಗೆಂದು ಇಲ್ಲಿ ಗಾಂಧೀವಾದವನ್ನು ದೂರುವುದು ಸರಿಯಲ್ಲ. ಮುಖ್ಯ ತಪ್ಪು ಇರುವುದು ನಮ್ಮ ಸಮಾಜ ಹೋಗುತ್ತಿರುವ ದಿಕ್ಕಿನಲ್ಲಿ.

ಕೊನೆಯದಾಗಿ ಒಂದು ಮಾತು.

ಕೆಲವು ದಿನಗಳ ಹಿಂದೆ ವಿದೇಶಿ ನೇರ ಬಂಡವಾಳ ಹೂಡಿಕೆ ಕುರಿತು ಚರ್ಚೆಯೊಂದನ್ನು ಟಿವಿಯಲ್ಲಿ ನೋಡುತ್ತಿದ್ದೆ. ಹತ್ತರಲ್ಲಿ ಎಂಟು ಮಂದಿ ಈ ಹೂಡಿಕೆ ಬೇಕು ಅಂತ ವಾದಿಸಿದರು.

ಇನ್ನಿಬ್ಬರು ಅದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಹೇಳಲು ಹೋದಾಗ, ಉಳಿದವರೆಲ್ಲ ಸೇರಿಕೊಂಡು ಅಂಕಿ-ಸಂಖ್ಯೆಗಳ ಮೂಲಕ ಅವರ ದನಿಯನ್ನು ಅಡಗಿಸಿಬಿಟ್ಟರು. ವಾಸ್ತವ ಏನೆಂಬುದನ್ನು ಅರಿಯುವ ವ್ಯವಧಾನವಾಗಲೀ, ಅದರತ್ತ ಗಮನಹರಿಸುವುದಾಗಲೀ ಯಾರಿಗೂ ಬೇಕಿಲ್ಲ. ನಮ್ಮ ಸುಖ, ನೆಮ್ಮದಿ ಕಲ್ಪನೆಯೇ ಬೇರೆಯಾಗಿದೆ.

ನಮ್ಮಷ್ಟಕ್ಕೆ ನಾವೆಲ್ಲರೂ ಒಂದೊಂದು ದ್ವೀಪವಾಗುತ್ತಿದ್ದೇವೆ. ಆದರೆ ಮನುಷ್ಯ ಪರಸ್ಪರ ಬೆಚ್ಚಿಕೊಳ್ಳಬೇಕು ಎಂದು ಪ್ರತಿಪಾದಿಸುತ್ತಿದ್ದ ಗಾಂಧೀಜಿಯವರಲ್ಲಿ ದ್ವೀಪವಾಗುವ

ಈ ಕಲ್ಪನೆಯೇ ಇರಲಿಲ್ಲ.

– ಗಿರೀಶ್ ಕಾಸರವಳ್ಳಿ..

(**ಪ್ರಜಾವಾಣಿ : 26.01.2014**)

ಬಾಪು ಪ್ರಪಂಚ 'ಡಿಜಿಟಲ್ ಆವೃತ್ತಿ'

' ಬಾಪು ಪ್ರಪಂಚ ' ಮಾಸಿಕ ಪತ್ರಿಕೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆ. ಇದು ಗಾಂಧಿ ವಿಚಾರ ಧಾರೆಗಳನ್ನು ಮತ್ತು ಗಾಂಧೀಜಿ ಜೀವನ ಚಿತ್ರಣಗಳನ್ನು ಜನಸಮುದಾಯಕ್ಕೆ ತಿಳಿಸುವ ಪ್ರಯತ್ನ ಮಾಡುತ್ತಿದೆ. ಕಳೆದ ಆರೇಳು ವರ್ಷಗಳಿಂದ ಇದು ಮುದ್ರಣ ರೂಪದಲ್ಲಿ ಪ್ರಕಟಗೊಳ್ಳುತ್ತಿತ್ತು. ಕಳೆದೆರಡು ವರ್ಷಗಳಿಂದ ಇದನ್ನು ಡಿಜಿಟಲ್ ರೂಪಕ್ಕೂ ಪರಿವರ್ತಿಸಿದ್ದೇವೆ . ಈಗ ಮುದ್ರಣ ಮತ್ತು ಡಿಜಿಟಲ್ ಎರಡೂ ಆವೃತ್ತಿಗಳಲ್ಲಿ ಬಾಪು ಪ್ರಪಂಚ ಪತ್ರಿಕೆ ಓದುಗರಿಗೆ ಲಭ್ಯವಿದೆ.

ಪ್ರಸ್ತುತ ಬಾಪು ಪ್ರಪಂಚ ಪತ್ರಿಕೆಯ ಚಂದಾದಾರರ ಸಂಖ್ಯೆ ಬಹಳ ಕಡಿಮೆ ಇದೆ. ಇದರ ಜೊತೆಗೆ ಪತ್ರಿಕೆಯ ಮುದ್ರಣವೆಚ್ಚ ದುಬಾರಿಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಅಂಚೆ ಮೂಲಕ ಪತ್ರಿಕೆಯ ವಿತರಣೆ ತ್ರಾಸದಾಯಕವಾಗಿರುವ ಹಿನ್ನೆಲೆಯಲ್ಲಿ ನಾವು ಪತ್ರಿಕೆಯನ್ನು ಪೂರ್ಣವಾಗಿ ಡಿಜಿಟಲ್ ಮಾಧ್ಯಮಕ್ಕೇ ಸೀಮಿತಗೊಳಿಸಲು ಯೋಚಿಸುತ್ತಿದ್ದೇವೆ .ಇದಕ್ಕೆ ಡಿಜಿಟಲ್ ಮಾಧ್ಯಮದ ಅನೇಕ ಅನುಕೂಲಗಳು ಕಾರಣವಾಗಿವೆ . ಡಿಜಿಟಲ್ ಪತ್ರಿಕೆಯ ಎಲ್ಲ ಪುಟಗಳನ್ನೂ ಬಣ್ಣದಲ್ಲಿ ವಿನ್ಯಾಸಗೊಳಿಸಿ ಓದುಗರಿಗೆ ಅಲ್ಪ ವೆಚ್ಚದಲ್ಲಿ ವಿತರಿಸಬಹುದು . ಬಾಪು ವಿಚಾರಗಳನ್ನು ಯುವಸಮೂಹಕ್ಕೆ ತಲುಪಿಸುವುದು ನಮ್ಮ ಪ್ರಮುಖ ಆದ್ಯತೆಯಾಗಿರುವುದರಿಂದ ಯುವ ಸಮುದಾಯ ಇಷ್ಟಪಡುತ್ತಿರುವ ಡಿಜಿಟಲ್ ಮಾಧ್ಯಮವನ್ನೇ ನಾವು ಅನಿವಾರ್ಯವಾಗಿ ಆಶ್ರಯಿಸ ಬೇಕಾಗಿದೆ.

ಈಗಾಗಲೇ ನಾವು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಸಾಮಾಜಿಕ ಜಾಲತಾಣಗಳಾದ ಫೇಸ್ ಬುಕ್ , ವಾಟ್ಸ್ ಆಪ್ , ವೆಬ್ ಪೋರ್ಟಲ್ ಗಳಲ್ಲಿ ನಮ್ಮ ಕಾರ್ಯಕ್ರಮಗಳ ಪ್ರಕಟಣೆ ಮತ್ತು ಪ್ರಚಾರವನ್ನು ಮಾಡುತ್ತಿದ್ದೇವೆ . ಹೀಗಾಗಿ ಬಾಪು ಪ್ರಪಂಚ ಮಾಸಿಕ ಪ್ರಕಟಣೆಯನ್ನು ನಮ್ಮ ಕಾರ್ಯಚಟುವಟಿಕೆಗಳಿಗೆ ಹೇಗೆ ಪರ್ಯಾಯ ರೀತಿಯಲ್ಲಿ ಬಳಸಿಕೊಳ್ಳ ಬಹುದು ಎನ್ನುವ ವಿಚಾರವನ್ನೂ ನಾವು ಚರ್ಚಿಸುತ್ತಿದ್ದೇವೆ . ಈ ಬಗ್ಗೆ ನಿಮ್ಮ ಅಭಿಪ್ರಾಯ ಹಾಗೂ ಅನಿಸಿಕೆಗಳನ್ನು ತಿಳಿಸಿದರೆ ಅದು ನಮಗೆ ನೆರವಾಗುತ್ತದೆ . ದಯವಿಟ್ಟು ನಿಮ್ಮ ಅನಿಸಿಕೆ , ಅಭಿಪ್ರಾಯಗಳನ್ನು ಸಂಪಾದಕರಿಗೆ ತಿಳಿಸಿ .

ಸಂಪಾದಕರು

ಬಾಪು ಪ್ರಪಂಚ

ಗಾಂಧಿ ಭವನ , ಕುಮಾರ ಕೃಪ ರಸ್ತೆ

ಬೆಂಗಳೂರು – 560001

e mail : gandhibhavanbangalore@gmail.com

ಮೊಬೈಲ್ : +91 90356 54646



ಅಂತರಂಗದೊಳಗಿನ ಮಹಾತ್ಮನ ಅನ್ವೇಷಣೆ...

"ರಕ್ತ ಮಾಂಸಗಳು ತುಂಬಿದ ಇಂಥ ಒಬ್ಬ ಮನುಷ್ಯ ಈ ಲೋಕದಲ್ಲಿ ನಡೆದಾಡಿದ್ದ ಎಂದರೆ ಮುಂಬರುವ ಜನಾಂಗಗಳು ಅಚ್ಚರಿ ಪಡುತ್ತವೆ" ಎಂದು ಆಲ್ಬರ್ಟ್ ಐನ್ಸ್ಟೈನ್ ಅವರು ಮಹಾತ್ಮರನ್ನು ವರ್ಣಿಸಿದ ಮಾತುಗಳು ಲೋಕದಲ್ಲಿ ಅಮರವಾಗಿದೆ. ನಮಗೆ ಆಲ್ಬರ್ಟ್ ಐನ್ ಸ್ಟೈನ್ ಹೆಸರು ಗೊತ್ತು. ಅವರು ವಿಜ್ಞಾನಿ ಎಂದು ಗೊತ್ತು. ಆದರೆ ನಮ್ಮಲ್ಲಿ ಬಹುತೇಕರಿಗೆ ಅವರ ವಿಜ್ಞಾನ ತತ್ವ ಗೊತ್ತಿಲ್ಲ. ಅವರು ನಾವು ಹೇಳುವ ದೇವರ ಅಸ್ತಿತ್ವವನ್ನು ನಂಬುತ್ತಿರಲಿಲ್ಲ ಎಂಬುದು ಗೊತ್ತು. ಆದರೆ ಅವರು ಈ ಮಹಾತ್ಮನ ಮಹತ್ವವನ್ನು ಸುಸ್ಪಷ್ಟವಾಗಿ ಗುರುತಿಸಿದ್ದರು. ಐನ್ ಸ್ಟೈನ್ ಒಬ್ಬ ಮಹಾನ್ ವಿಜ್ಞಾನಿ. ಅವರಿಗೆ ಸತ್ಯ ಎಂಬುದು ಗೊತ್ತಿತ್ತು. ಹಾಗಾಗಿ ಅವರಿಗೆ ಮತ್ತೊಬ್ಬ ವಿಜ್ಞಾನಿಯ ಬಗ್ಗೆ ಅರ್ಥವಾಗುತ್ತಿತ್ತು. ಗಾಂಧೀಜಿ ಸತ್ಯ ಸಂಶೋಧನೆಯ ವಿಚಾರದಲ್ಲಿ ವಿಜ್ಞಾನಿಯ ನಿಷ್ಠೆಯಲ್ಲಿ ತಪಸ್ಸನ್ನಾಚರಿಸಿದವರು. ಹೀಗೆಂದ ಮಾತ್ರಕ್ಕೆ ನಮಗೆ ಗಾಂಧೀಜಿ ಗೊತ್ತು ಎಂದು ಹೇಳುವಂತಿಲ್ಲ. "ನಮಗೆ ಗಾಂಧೀಜಿ ಅವರ ಹೆಸರು ಗೊತ್ತು. ಅವರು ಮಹಾತ್ಮರು ಎಂದು ಎಲ್ಲರೂ ಹೇಳುವುದು ಗೊತ್ತು. ನಮಗೆ ಅಷ್ಟೊಂದು ದೇವರುಗಳ ಹೆಸರುಗಳು ಗೊತ್ತಿರುವ ಹಾಗೆ!"

"Be the change you want to see in others" ಎಂಬ ಮಹಾತ್ಮರ ನುಡಿಯನ್ನು ಕನ್ನಡದಲ್ಲಿ ಮೂಡಿಸುವ ಆಸೆ ಆಗುತ್ತದೆ. ಆದರೆ ಅದೇಕೋ ಪ್ರತೀ ಬಾರೀ ಸೋತ ಅನುಭವವಾಗುತ್ತದೆ. ನಾವು ಪದಗಳ ಮೋಹದಲ್ಲಿ ಸಿಲುಕಿದಾಗ ನಮ್ಮ ಆಂತರ್ಯದ ಬದಲಾವಣೆ ಆಗುವುದಾದರೂ ಹೇಗೆ. ಬದಲಾವಣೆ ನಾನಾಗಬೇಕು. ಮತ್ತೆ ಅದೇ ಪ್ರಶ್ನೆ ನಾನು ಅಂದರೆ. ಬಹುಶಃ ನನ್ನಲ್ಲಿ 'ನಾನು' ಎಂಬುದಿಲ್ಲದ ಒಂದು ಬದಲಾವಣೆಯನ್ನು ಆಗಗೊಡಬೇಕು. ಸ್ವಾಮಿ ವಿವೇಕಾನಂದರು ಹೇಳುವ ಹಾಗೆ "ನೀನು ನಿನ್ನಲ್ಲಿ ನಿಶ್ಚಿಂತನಾಗಿ ವಿರಮಿಸು. ಮಾಡುವುದೆಲ್ಲಾ ಆ ಪರಮಾತ್ಮನಿಗೆ ಸೇರಿದ್ದು". ಆದರೆ ಇಲ್ಲಿ ಮುಖ್ಯವಾದದ್ದು ಅವರು 'ನೀನು' ಎಂದು ಸಂಬೋಧಿಸುತ್ತಿರುವ 'ನಾನು'ವನ್ನು ಅರ್ಥೈಸುವುದು!

ನಮಗೆ ಬದುಕಿನಲ್ಲಿ ಅತ್ಯಂತ ಕಷ್ಟವಾದದ್ದು ನಮ್ಮನ್ನು ನಾವು ಅವಲೋಕಿಸಿಕೊಳ್ಳುವುದು. ಉದಾಹರಣೆಗೆ ಒಂದು ಪುಟ್ಟ ಸಂಗತಿಯನ್ನು ನಮಗೆ ನಾವೇ ಅವಲೋಕಿಸಿಕೊಂಡು ಹೇಳುವುದಾದರೆ, ನಾವೇನು ಖರ್ಚು ಮಾಡುತ್ತಿದ್ದೇವೆ ಎಂದು ಬರೆಯಲು ಪ್ರಯತ್ನಿಸಿದವರೆಲ್ಲಾ ಅದನ್ನು ಬರೆಯಲಿಕ್ಕೆ ಪ್ರಾರಂಭಿಸಿದ ಒಂದೆರಡು ದಿನದಲ್ಲಿ ಅದರ ಬಗ್ಗೆ ತಲೆ ಕೆಟ್ಟು ಹೋಗಿ, ಕೈ ಬಿಟ್ಟು ಬಿಡುತ್ತೇವೆ. ನಾವು ನಮ್ಮ ಬಗ್ಗೆ ಡೈರಿ ಬರೆಯಬೇಕು ಎಂದು ಹೋದಾಗಲೆಲ್ಲಾ ಅದು ನಾವು ಓದಿದ ಯಾವುದೋ ಶೈಲಿಯ ಹಾದಿ ಹಿಡಿದು ಸತ್ಯಬಿಟ್ಟು ಉಳಿದೆಲ್ಲವೂ ಆಗತೊಡಗಿ ಯಾವುದೋ ಅರ್ಥವಿಲ್ಲದ ಕಥೆ ಓದಿದ ಅನುಭವವಾಗಿ ಆ ಪ್ರಯತ್ನ ತಣ್ಣಗೆ ನಿಂತು ಹೋಗಿ ನಮ್ಮ ಡೈರಿಯ ಬಹುತೇಕ ಪುಟಗಳು ಖಾಲಿಯಾಗಿ ಉಳಿದುಬಿಡುತ್ತವೆ. "ಸರಳತೆ ಎಂಬ ಮುಕ್ತತೆ ತುಂಬಾ ಮುದವಾದದ್ದು. ಆದರೆ ಸರಳತೆ ಎಂಬ ಸಾಮಾನ್ಯತೆಯಿಂದ ನಾವು ಬಹುದೂರ ಸಾಗಿಬಿಟ್ಟಿದ್ದೇವೆ. ಅದರ ಬಳಿ ಉಳಿದವರು ಮಾತ್ರವೇ ಮಹಾತ್ಮರು. ಮಿಕ್ಕವರೆಲ್ಲಾ ಬರೀ ಉಳಿದವರು". ಗಾಂಧೀಜಿಯವರಿಗೆ ತಮ್ಮ ಬದುಕನ್ನೇ ಸತ್ಯಾನ್ವೇಷಣೆ ಮಾಡಿಕೊಳ್ಳಲು ಸಾಧ್ಯವಾಗಿದ್ದರಿಂದಲೇ ಅವರು ಮಹಾತ್ಮರಾಗುವುದು ಸಾಧ್ಯವಾಯಿತು.

ಮಹಾತ್ಮರ ಸಾಧನೆಯಿರುವುದು ಅವರು ವ್ಯವಸ್ಥೆಗಳ ಒಡನೆ ಮಾಡಿದ ಹೋರಾಟದಲ್ಲಲ್ಲ. ಅವರು ತಮ್ಮನ್ನು ತಾವು ಕಂಡುಕೊಳ್ಳಲು ನಡೆಸಿದ ಪ್ರಯತ್ನಗಳಲ್ಲಿ. ತಮ್ಮ ತಪ್ಪುಗಳನ್ನು ಮುಕ್ತವಾಗಿರಿಸಿಕೊಳ್ಳಲು ಅವರಿಗೆ ಎಂದೂ ಮುಜುಗರವೆನಿಸಲಿಲ್ಲ. ಅದರ ಪರಿಣಾಮಗಳನ್ನು ಎದುರಿಸಲಿಕ್ಕೆ ಅವರು ಸರ್ವದಾ ಸಿದ್ಧರಿದ್ದರು. ಒಂದೆಡೆ ಅವರು ಹೇಳಿದ ಮಾತೊಂದು ನೆನಪಾಗುತ್ತದೆ. "ಕ್ಷಮಿಸುವವನೇ ಧೀರ". ಕ್ಷಮಿಸುವವ ಹೇಗೆ ಧೀರನಾಗುತ್ತಾನೆ. ನಮ್ಮನ್ನು ನಾವು ಅರ್ಥ ಮಾಡಿಕೊಂಡಾಗ ಇತರರ ತಪ್ಪು ನಮಗೆ ದೊಡ್ಡದೆನಿಸುವುದಿಲ್ಲ. ಇತರರು ತಪ್ಪು ಮಾಡಿದಾಗ ಕೂಡಾ ಅದರಿಂದ ನಾವು ಕಲಿಯುತ್ತಾ ಹೋಗುತ್ತೇವೆ. ಗಾಂಧಿ ಎಂಬ ವ್ಯಕ್ತಿ ಗಾಂಧೀಜಿ

ಆಗಿದ್ದು, ಗಾಂಧೀಜಿ ಎಂಬ ಹಿರಿಯರು ಮಾಹಾತ್ಮರಾಗಿ ಏರಿದ ಮೆಟ್ಟಿಲುಗಳು ಇಲ್ಲಿವೆ ಎನಿಸುತ್ತದೆ.

ಗಾಂಧೀಜಿ ಅವರ ಕಾರ್ಮಿಕ ಪರ ಹೋರಾಟದ ಒಂದು ಘಟನೆ ನನ್ನ ಮನಸ್ಸನ್ನು ತೀವ್ರವಾಗಿ ತಟ್ಟಿದೆ. ಅಹಮದಾಬಾದಿನ ಗಿರಣಿಯ ಕಾರ್ಮಿಕರ ಮೂಲಭೂತ ಅವಶ್ಯಕತೆಗಳ ಬೇಡಿಕೆಯ ಹೋರಾಟಕ್ಕೆ ಗಾಧೀಜಿ ಮುಂದಾಳತ್ವ ವಹಿಸಲು ಒಪ್ಪಿದರು. ಕಾರ್ಮಿಕರು ಮುಷ್ಕರ ಹೂಡಿ ಕೆಲಸವನ್ನೂ ಬಹಿಷ್ಕರಿಸಿದರು. ಏನೇನೂ ಉಪಯೋಗ ಕಾಣಲಿಲ್ಲ. ಆಡಳಿತ ವರ್ಗ ಕೆಲವೊಂದು ದುರ್ಬಲ ಮನಸ್ಸಿನ ಕಾರ್ಮಿಕರನ್ನು ಪುಸಲಾಯಿಸಿ ಕಾರ್ಮಿಕ ವರ್ಗದಲ್ಲಿ ಒಡಕು ಮೂಡಿಸಲು ಯತ್ನಿಸಿತು. ಆಗ ಗಾಂಧೀಜಿ ಆಡಳಿತ ವರ್ಗವನ್ನು ದೂಷಿಸಲಿಲ್ಲ. ಒಡೆದ ಕಾರ್ಮಿಕರನ್ನೂ ದೂಷಿಸ ಹೋಗಲಿಲ್ಲ. ಕಾರ್ಮಿಕರನ್ನು ಉದ್ದೇಶಿಸಿ "ನೀವೆಲ್ಲಾ ಒಟ್ಟಾಗುವವರೆಗೆ ನಾನು ಅಮರಣಾಂತ ಉಪವಾಸ ಮಾಡುತ್ತೇನೆ" ಎಂದು ಹೇಳಿ ಉಪವಾಸ ಕುಳಿತುಬಿಟ್ಟರು. ಒಂದೆರಡು ದಿನದಲ್ಲೇ ಕಾರ್ಮಿಕರೆಲ್ಲಾ ಮೂಕವಾದರು. ಆ ಮೂಕತನದಲ್ಲಿ ಅವರೆಲ್ಲಾ ತಮ್ಮಲ್ಲಿನ ತಮವನ್ನು ಕಳೆದುಕೊಂಡು ಒಂದಾಗಿ ಹೋದರು. ಅಹಮದಾಬಾದಿನ ಗಿರಣಿಯ ಮಾಲೀಕರು, ಗಾಂಧೀಜಿಯವರ ಬಳಿ ಬಂದು ಮಹಾತ್ಮರೇ ನಿಮ್ಮ ಕಾರ್ಮಿಕರ ಪರವಾಗಿನ ಎಲ್ಲಾ ಬೇಡಿಕೆಗಳನ್ನೂ ನಾವು ಭೇಷರತ್ತಾಗಿ ಒಪ್ಪಿದ್ದೇವೆ, ದಯವಿಟ್ಟು ನಿಮ್ಮ ಉಪವಾಸ ನಿಲ್ಲಿಸಿ ಎಂದು ಮಹಾತ್ಮರಿಗೆ ಶರಣಾದರು.

ಗಾಂಧೀಜಿಯವರ ಬ್ರಿಟಿಷರ ವಿರುದ್ಧದ ಹೋರಾಟವನ್ನೇ ಗಮನಿಸೋಣ. ಅವರು ವ್ಯಕ್ತಿಗತವಾಗಿ ಮಾಡಿದ ಟೀಕೆಗಳು ಯಾವ ಗ್ರಂಥಗಳನ್ನು ಜಾಲಾಡಿದರೂ ಸಿಗಲಾರವೇನೋ. ಅವರನ್ನು ಕೋರ್ಟಿನಲ್ಲಿ ಕಟಕಟೆಯಲ್ಲಿ ನಿಲ್ಲಿಸಿದಾಗ ಹಲವಾರು ಬ್ರಿಟಿಷ್ ನ್ಯಾಯಾದೀಶರು ತಮ್ಮ ಸ್ಥಾನದಿಂದ ಎದ್ದು ಗೌರವ ಸಲ್ಲಿಸುತ್ತಿದ್ದರು. ಅವರನ್ನು ಬಂಧಿಸಿದ್ದ ಹಲವಾರು ಜೈಲರುಗಳು ನಮ್ಮ ಬಳಿ ಒಬ್ಬ ಮಹಾತ್ಮನಿದ್ದಾನೆ ಎಂಬ ಪೂಜ್ಯಭಾವ ತಳೆದಿದ್ದರು. ಬ್ರಿಟಿಷ್ ಜನಾಂಗದ ಮನದಾಳವನ್ನು ಗಾಂಧೀಜಿ ಅವರಂತೆ ಹೊಕ್ಕ ಮತ್ತೊಬ್ಬ ಸಮಕಾಲೀನನಿರಲಿಲ್ಲ. ಕಡೆಗೆ 'ಗಾಂಧೀ' ಎಂಬ ಚಿತ್ರವನ್ನು ಅದ್ಭುತವಾಗಿ ಮಾಡಿ ವಿಶ್ವದೆಲ್ಲೆಡೆ ಗಾಂಧೀಜಿ ಅಂದರೆ ಏನೆಂದು ಜನಸಾಮಾನ್ಯನ ಮನದಲ್ಲಿ ಒಂದು ಸ್ವರೂಪ ಕೊಟ್ಟವನೂ ಬ್ರಿಟಿಷನೇ. ನಾವು ಯಾರ ಒಡನೆ ಹೋರಾಡುತ್ತೇವೆಯೋ ಅವರ ಮನದಲ್ಲೇ ಹೀಗೆ ಕುಳಿತುಕೊಳ್ಳುವ ರೀತಿ ಹಿಂದೆ ಆಗಿರದಿದ್ದುದು, ಇದು ಆತ್ಮ ಜಾಗೃತಿಯನ್ನು ಹೊಂದಿದ ಒಬ್ಬ ಮಹಾತ್ಮ ಜಗತ್ತನ್ನು ಆಳುವ ಪರಿ.

ಸಹಸ್ರಾರು ವರ್ಷಗಳ ಕಾಲ ಭಾರತ ಎಂಬುದು ಒಡೆದ ಗೂಡಾಗಿ ಛಿದ್ರ ಛಿದ್ರವಾಗಿದ್ದುದು ಚರಿತ್ರೆಯನ್ನು ಬಲ್ಲ ನಮಗೆಲ್ಲಾ ಅರಿಯದ ವಿಚಾರವಲ್ಲ. ಇಂದೂ ಕೂಡಾ ಹಲವು ಭಾಷೆ, ಹಲವು ಪರಿಯಲ್ಲಿ ನಾವು ಬೇರೆ ಬೇರೆಯಾಗಿಯೇ ಮತ್ತು ನೂರಾರು ವಿಷಯಗಳಲ್ಲಿ ಬಹಳಷ್ಟು ಛಿದ್ರ ಛಿದ್ರವಾಗಿಯೇ ಇದ್ದೇವೆ. ಇವೆಲ್ಲವುಗಳನ್ನೂ ಯಾವುದೇ ಬೇಲಿಗಳ ಪರಿಧಿಯ ಅಂಚಿಲ್ಲದೆ ಒಂದುಗೂಡಿಸಿದ ಮಹನೀಯತೆ ಮಹಾತ್ಮರದ್ದು. ತನ್ನನ್ನು ತಾನು ಕಂಡ ಮಹಾತ್ಮ ತನ್ನನ್ನು ಎಲ್ಲೆಲ್ಲಿಯೂ ಕಾಣಿಸುತ್ತಾನೆ. ರಾಮಾಯಣದಲ್ಲಿ ರಾಮ ಹೀಗೆ ಮಾಡಿದ್ದ ದೃಷ್ಟಾಂತವಿದೆ. ರಾಮ ಯುದ್ಧ ಮಾಡುವಾಗ ಆತನ ವಿರುದ್ಧ ಯುದ್ಧ ಮಾಡುತ್ತಿದ್ದವರಿಗೆ ತಮ್ಮ ಸಹಚರರೆಲ್ಲಾ ರಾಮನಾಗೇ ಕಂಡುಬಿಡುತ್ತಿದ್ದರಂತೆ. ಹಾಗೆ ಕಂಡಾಗ ತಮೋ ಗುಣಿಗಳಾದ ರಕ್ಕಸರು ಇಗೋ ರಾಮ ಹೊಡಿ ಎಂದು ತಮ್ಮ ತಮ್ಮನ್ನೇ ಬಡಿದುಕೊಳ್ಳುತ್ತಿದ್ದರು. ಗುಣಾತೀತರಾದವರು ತಮ್ಮಲ್ಲೇ ರಾಮನನ್ನೂ ಗುರುತಿಸಿಕೊಳ್ಳುತ್ತಿದ್ದರು. ಗಾಂಧೀಜಿಯವರ ವಿಚಾರದಲ್ಲಿ ಗಮನಿಸಿದರೂ ನಾವು ಕಾಣುವುದು ಇದೇ ಪುನರಾವರ್ತನೆಯನ್ನೇ.

ರಾಮಾಯಣದಲ್ಲಿ ಶ್ರೀರಾಮ ಹೇಳುತ್ತಾರೆ. "ಆತ್ಮಾನಾಂಮಾನುಷಂಮನ್ಯೇ ರಾಮಂ ದಶರಥಾತ್ಮಜಂ". ನಾನು ದಶರಥನ ಮಗ, ಸಾಮಾನ್ಯ ಮನುಷ್ಯ ರಾಮ ಎಂಬರ್ಥದಲ್ಲಿ. ಗಾಂಧೀಜಿ ತಮ್ಮನ್ನು ತಾವು ಅತೀ ಸಾಮಾನ್ಯರನ್ನಾಗಿ ಗುರುತಿಸಿಕೊಂಡಿದ್ದರು. ಅವರು ಯಾವುದೇ ಜನಪ್ರಿಯತೆಗೂ ಮಾರುಹೋಗಿರಲಿಲ್ಲ. ತಾವು ಹೇಳಿದ್ದೇ ಅಂತಿಮವಲ್ಲ ಎಂದು ಎಲ್ಲೆಡೆ ಪುನರುಚ್ಚರಿಸಿದರು. ನಾನೂ ತಪ್ಪು ಮಾಡುತ್ತೇನೆ. ಅದೂ ನನ್ನ ಒಂದು ಭಾಗ ಎಂದು ಹೇಳಲು ಅವರಿಗೆ ಯಾವ ಹಿಂಜರಿಕೆಯೂ ಇರಲಿಲ್ಲ. ಆದರೆ ಬದುಕಿನ ವಿಚಾರದಲ್ಲಿ ತಾವು ನಂಬಿದ್ದರ ಆಚೆ ಈಚೆ ಕದಲಲಿಲ್ಲ. ನಾನು ಹೇಳಿದ್ದನ್ನು ಉದಾಹರಣೆಯಾಗಿ ಸ್ವೀಕರಿಸಿ, ನಿಮ್ಮ ನಿಮ್ಮ ಸಂಶೋಧನೆಯ ಆಳದಲ್ಲಿ ನಿಮ್ಮನ್ನು ಕಂಡುಕೊಂಡು ಬಾಳಿರಿ ಎಂದವರು ಅವರು.

ನಾವು ಎಲ್ಲವನ್ನೂ ಸಿದ್ಧವಾಗಿರುವ ಸಾಮಗ್ರಿಗಳಂತೆ ಬಯಸುತ್ತಾ ನಮ್ಮ ದೇವರುಗಳನ್ನೆಲ್ಲಾ ಕಲ್ಲು ಮಾಡಿ , ಮಹಾತ್ಮರನ್ನೆಲ್ಲಾ ಫೋಟೋಗಳಲ್ಲಿ, ಶೀರ್ಷಿಕೆಗಳಲ್ಲಿ ಮಲಗಿಸಿಬಿಟ್ಟು ಅಕ್ಟೋಬರ್ ಎರಡರಂದು "ಬೋಲೋ ಮಹಾತ್ಮಾ ಗಾಂಧೀಜಿ ಕಿ ಜಯ್" ಎನ್ನುವ ವಿಧಿ ಮುಗಿಸಿ, ಉಳಿದಂತೆ ನಮ್ಮ ಎಡಬಿಡದ ಚಿಂತೆಗಳಲ್ಲಿ ಕಳೆದು ಹೋಗಿದ್ದೇವೆ.

ಇಂದು ನಮ್ಮಲ್ಲಿ ಇದ್ದ ಮಹಾತ್ಮ ಎಂಬ ಶ್ರೇಷ್ಠ ಭಾವಕ್ಕೆ ಅನೈತಿಕ ಬಣ್ಣ ಬಳಿಯುತ್ತಿರುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ನಮ್ಮ ಮನದ ಕಣ್ಣಿನಲ್ಲಿರುವ ಅಶುಭ್ರತೆಯನ್ನು ನಾವು ಲೋಕದಲ್ಲೂ ಕಾಣುತ್ತೇವೆ ಅಷ್ಟೇ. ಇದು ಖಂಡಿತ ದೇಶದ ಮಾನಸಿಕ ಆರೋಗ್ಯಕ್ಕೆ ಮಾರಕ. ನಮ್ಮೊಳಗೇ ಮಾರಕ ರೋಗಗಳನ್ನು ಹರಡಿಕೊಂಡು ನಾವು ಶಾಶ್ವತರು ಅಭಿವೃದ್ಧಿ ಸಾಧಿಸಿಬಿಡುತ್ತಿದ್ದೇವೆ ಎಂಬ ಕ್ಷುಲ್ಲಕ ವ್ಯಾಧಿಯುಕ್ತ ಭ್ರಮೆ.

ಗಾಂಧೀಜಿ ಎಂಬ ಒಂದು ಯುಗ ಒಬ್ಬ ವ್ಯಕ್ತಿಯಿಂದ ಆರಂಭವಾಗಿ, ಆ ವ್ಯಕ್ತಿಯೊಡನೆಯೇ ಅಂತ್ಯವಾಗಿ ಹೋಗಿ, ನಾವು ಹುಟ್ಟುವ ಮುಂಚೆಯೇ ಆಗಿ ಹೋದ ಒಂದು ಕಾಲವಾಗಿದ್ದು ಅಂತಹ ಅಮೂಲ್ಯ ಘಳಿಗೆ ನಮ್ಮ ಜೀವನದಲ್ಲೂ ಫಲಿಸೀತೆ ಎಂದು ಕಾದು ನೋಡುವ ನಿರೀಕ್ಷೆ ಮಾತ್ರ ನಮ್ಮದಾಗಿದೆ. ಈ ನಿರೀಕ್ಷೆಯ ಹಾದಿಯಲ್ಲಿ ನಾವು ನಮ್ಮೊಳಗಿನ ಆಳದಲ್ಲಿರುವ ಆ ಮಹತ್ವವನ್ನು ಅರಸಿದಲ್ಲಿ, ಆ ಮಹಾತ್ಮ ನಮ್ಮ ಮುಂದೆ ಬಂದು ನಿಂತರೂ ನಿಂತಾನು. ಅಂತದ್ದಕ್ಕೆ ನಮ್ಮನ್ನು ಪ್ರಯತ್ನಶೀಲವಾಗಿಸು ಎಂದು ಆ ಪರಮಾತ್ಮನಲ್ಲಿ ಪ್ರಾರ್ಥಿಸೋಣ.

ಕನ್ನಡ ಸಂಪದದಲ್ಲಿ Kannada Sampada ಮೂಡಿಬರುತ್ತಿರುವ ಬರಹಗಳನ್ನು ನಮ್ಮ 'ಸಂಸ್ಕೃತಿ ಸಲ್ಲಾಪ ತಾಣವಾದ www.sallapa.com ನಲ್ಲಿ ಆಸ್ವಾದಿಸಲು ತಮ್ಮನ್ನು ಆದರದಿಂದ ಸ್ವಾಗತಿಸುತ್ತಿದ್ದೇವೆ ■

MAHATMA GANDHI FOR THE 21ST CENTURY

Building A Future of Peace, Justice, Fraternity and Sustainable Development



- D. Jeevan Kumar

Karnataka Gandhi Smarak Nidhi, Bengaluru organized an International Seminar to commemorate the 75thAnniversary of the Gandhi Smarak Nidhi, New Delhi on the theme, MAHATMA GANDHI FOR THE 21STCENTURY - Building A Future of Peace, Justice, Fraternity and Sustainable Development on the 24th and 25th of August 2024 at Gandhi Bhavan, Bengaluru. The seminar was a modest attempt to understand contemporary global challenges in the light of Gandhian and other humanistic philosophies and actions.

The International Seminar had six Technical Sessions:

- Gandhi, Conflict Resolution and Peace Building
- Gandhi for Sustainable and Equitable Development
- Gandhi, Democracy and Dissent
- Gandhian Values and the Revolutionary Power of Technology:
- Is a Synthesis Possible?
- Dialogue Among Religions for Peace and Harmony
- Gandhi, Globalization and Global Governance

My Takeaways and Reflections on the International Seminar are as follows:

Of all the great figures of the 20th century, Gandhi has perhaps best stood the test of time. In the aftermath of a century of unprecedented mass violence, many see in him the prophet of the only possible future for mankind, a future without hatred, greed and lust for power. Interest in Gandhi's thought and action seem to be on the increase, and his message to the world appears uniquely relevant.

Looking back from the vantage point of the 21st century, it seems nothing short of a miracle how in the first decade of the 20th century, Gandhi launched his crusades against racialism, colonialism, runaway industrialism, religious fundamentalism and violence. He heroically opposed the treatment of his fellow-countrymen in South Africa by courting for



himself the humiliation of the humblest Indian so that he might, in his own person, face the punishment meted out for disobedience. When he called for non-cooperation with the British in India, he himself disobeyed the law and insisted that he must be among the first to go to prison. When he denounced the adoption by India of Western industrialism, he installed a spinning wheel in his own house and laboured at it daily with his own hands. When he set out to combat inter-communal violence, he faced death by starvation, in an act of penance, for the error and sin of the members of his community.

Mahatma Gandhi was not an armchair academician or a cloistered visionary. He was deeply concerned with the world around him. He disclaimed being a visionary. He said: “Mere discipline cannot make leadership. The latter calls for faith and vision”. The core of his vision for the people of India was contained in his concept of Swaraj,the fountainhead from which the whole range of the concepts of Gandhian philosophy flow. It necessarily starts with political self-rule as a means to achieving economic, social and moral freedom. It applies equally to the individual, the society and the state.

Gandhi taught us the doctrine of Satyagraha, not as a passive submission to evil but as an active and positive instrument for the peaceful solution of all kinds of differences – personal, national or international. He showed us that the human spirit is more powerful than the mightiest of weapons. He applied moral values to political action and pointed out that ends and means can never be separated, for the means ultimately govern the end. If the means are evil, then the end itself becomes distorted and at least partly evil. Any society based on injustice must necessarily harbour the seeds of conflict and decay within it, so long as it does not get rid of that evil.

In Gandhi, there was a confluence of different influences which guided him to mould a mighty instrument of Satyagraha and gave direction to his mission: A Gujarati hymn from India, a New Testament from Palestine, a book from Russia, a pamphlet from America, a book and the Suffragette influence from Britain, and many more. All these influences came together to lead Gandhi, as if by a hand of destiny, into the battlefield of the 20thcentury to wage one of the noblest battles that have been fought by a single human being for the liberation of an entire nation. They combined to make Gandhi the greatest non-violent revolutionary of the age.

Gandhi's non-violence or Satyagraha was intended not only to solve national problems of injustice but also international conflicts and wars. He considered war as a morally degrading and brutalizing phenomenon and hence, emphasized disarmament and creation of a non-violent civilization. Pacifism, according to him, must be total and not partial, and must find its expression in a broad movement that seeks not merely abolition of war but of the entire non-pacifist civilization. Gandhi maintained that the dread of atom bomb or nuclear weapons would not abolish wars or usher in a peaceful social order. A peaceful world social order was possible only through the positive philosophy of non-violence.

After obtaining political independence, Gandhi wanted India to become an ideal democracy. A democracy established on the principle of non-violence was to be of a unique kind. Gandhi's ideal non-violent democracy was a federation of decentralized, self-sufficient, self- administered, interdependent and cooperative village republics. In such a democracy, power is decentralized. In an ideal non-violent democracy of Gandhi's conception

there was no need of a state. Gandhi had said, "Political power means capacity to regulate national life through representations. If national life becomes so perfect as to become self-regulated no representation becomes necessary. There is then a state of enlightened anarchy. In such a state everyone is his own ruler. He rules himself in such a manner that he is never a hindrance to his neighbour. In the ideal state, therefore, there is no political power, because there is no state." But Gandhi knew the limitations in realizing such an ideal. So he added, "But the ideal is never fully realized in life."

Gandhi's efforts towards "spiritualizing economics" are reflected in his concept of Trusteeship. He based the concept on the first sloka of the Isopanishad, according to which one is asked to dedicate everything to God, and then use it only to the required extent. In other words, in the first instance, everything must be surrendered to God, and then out of it, one may use only that which is necessary, according to one's strict needs. The spirit behind this concept is detachment and service.

Gandhi's idea of Trusteeship arose from his faith in the law of non-possession. It was founded on his religious belief that everything belonged to God, a higher power or Nature. Therefore, the bounties of the world were for His people as a whole, and not for any particular individual. When an individual had more than his respective portion, he became a trustee of that portion. If this principle could be imbibed by people in general, Trusteeship would become a legalized institution. Gandhi wished it to become a gift from India to the world.



Basically, Gandhi suggested the concept of Trusteeship as an answer to the economic inequalities of ownership and income, a kind of non-violent way of resolving all social and economic conflicts in the world. Therefore, man's dignity and not his material prosperity, is the centre of Gandhian economics.

Gandhi's theory of Non-Violence is a positive philosophy and not a passive ethics. It is based on the assumption that men who wish to practice it must have certain moral and spiritual pre-requisites, a positive love for all beings and the pursuit of truth. The tradition of non-violence perhaps existed in all cultures but Gandhi converted it into a practical ethics which could be applied in day-to-day life. This offered tremendous possibilities for contemporary India as well as the whole world. Here was an alternative to physical force which had so far been acknowledged as the sine qua non of the social order in the soul force (Satyagraha) or the spiritual and moral power.

Gandhian principles of the moral order are not based on self-interest or individual enjoyment, but on the social objective of Sarvodaya, or happiness for all. The logic of altruism cannot be deduced from egotism, the love of society from the love of oneself, the whole from the part. Gandhi's altruism was derived from the concept of mankind, even all creation. Gandhi's was a 'creative altruism', which was characterized by pure, continuous and unbounded love for all.

Gandhi constantly reinforced the need for the promotion of the right understanding of religion, and for stressing the common core of all religions. There is a need for promoting respect for others' faiths and religious beliefs. There is the need for adopting measures for promoting inter-religious unity, harmony and fraternity. There is a need for highlighting the role of religion as a promoter of peace and as an instrument of conflict resolution. There is a need for building up public opinion against communalism, religious fundamentalism and extremism, and religious and racial discrimination. Taking a cue from Gandhi, we



need to nip communal hatred in the bud, especially in the younger generation, by not allowing their minds to become communalized.

We need to acknowledge, with concern, that the processes of Globalization often lead to a marginalization of morality and traditional ethical values. Among the unfavourable by-products of Globalization is the severing of youth from traditional foundations and values. Globalization is also resorting to a kind of 'deification' of market processes to the detriment of religious and spiritual ideals. It therefore becomes the duty of religion to inject a 'dose of spirituality' into our contemporary concerns. To do this, we need to discover our spiritual roots and common spirituality, as Gandhi constantly exhorted us to do.

Part of the process of discovering our spiritual roots and common spiritual elements must be to include in the conversation, as many young people from as many cultures and faiths as possible. Top-most priority must be given to finding ways in which to engage with young people, in cross-traditional and cross-cultural contexts, about the potential common values and spiritual foundations in all of us.

Gandhi was not an intellectual in the academic sense of the term. He was not a scholar or a philosopher. He was not a theoretician. His thinking had the quality of a creative genius. He was pre-eminently a man of action. He has written a great deal but his writings are designed as a guide to action and not for the acquisition of knowledge. They are generally concerned with the solution of real problems, arising out of the many-sided and complex situations of his time.

Arguably, Gandhi's greatest leadership trait was his ability to visualize the qualities of a successful, post-Independence Indian nation, and maintain a life-long focus on the four intertwined challenges that he believed must be collectively addressed for India to achieve success as a nation. The four challenges, or goals, as articulated by Ramchandra Guha were: to free India from British occupation, to end untouchability, to improve relations between Hindus and Muslims, and to make India into a self-reliant nation – economically and socially. Gandhi aligned most of the social movements he led around these four goals - starting with his work in South Africa and continuing until his death. He believed firmly that without addressing all four challenges simultaneously, India could not acquire independence and become a successful nation. Without communal harmony between Hindus and Muslims, or between upper caste and lower caste Hindu's, for example, Gandhi did not believe India would ever achieve its potential.

Gandhi was not a born leader, but he certainly had traits of one. He was a simple man leading a simple life, but strongly believed in and practiced the values of unity, equality, truth, non-violence, justice, and honesty. His values and personality were instrumental in fighting the might of the British. He was patient but persistent, as he knew attaining India's independence was no simple task While he was defiant, resistant, daring and provocative at times, he always remained calm, caring, humble and polite. He exhibited distinct characteristics, qualities and behaviour of a charismatic and transformational leader.

Gandhi was highly trusted by his followers, given the fact that he was not motivated to free India for personal self-interest, but for the betterment and concern of the people. He drew vast admiration due to his noble intentions, high moral values and ethical standards.

Gandhi has been a role-model and source of inspiration for many generations. His unconventional means to fight injustice (truth, non-violence, non-cooperation and peaceful resistance) have earned him high admiration and respect. He led from the front to attain India's independence, and influenced millions of followers to fight for a moral and just cause.



He epitomized life based on moral conduct, and showed its strength to the world. While laying the foundation for democracy in India, he has also showed how unity and humanity can fight the strongest of forces. While it is highly unlikely to witness another Gandhi in our lifetime, humanity has critical lessons to learn from his leadership and life.


Gandhi did not acquire his ideas and knowledge merely from books. He did not pass his time in libraries and museums poring over musty volumes. Much of his knowledge was the result of direct contact with life and the practical experience it offered. He, therefore, placed his ideas before the public, not in the language of the learned but in that of the average intelligent man and woman. He was a man of the masses and spoke to them in their own simple language, which they understood. He addressed them not about what he had read and studied in books but what he had seen, sensed, experienced and thought about. He described his own observations and his reactions to them. This is the method that has characterized great religious reformers and prophets.

Gandhi offers no convenient theories, logically and mathematically worked out. There are, as we have said, many gaps in reasoning, and apparent contradictions. Gandhi thought so rapidly that he jumped over many connecting links in the chain of reasoning. These links the practical worker or the theoretical student has to provide from his own intelligence, observation and experience.

Gandhi discussed economic and political problems from a higher moral and humanistic point of view. If, therefore, a young person wants to study Gandhi's economics and politics, s/he will have to content himself with very meagre systematic literature on these subjects. S/he will have to wade through a mass of material which must be arranged and systematized for oneself. It is the first major difficulty in understanding Gandhi's thought and schemes of reform. His ideas need to be systematized, co-ordinated and correlated. The trends in his thinking on the many subjects he discussed are scattered throughout his writings. They have to be arranged.

Gandhi views life as an organic whole. His concrete schemes are, therefore, intimately and organically connected with one another. Unity is achieved through some definite guiding and regulating ideas, values and principles.

It needs to be recognized that the Gandhian



vision aims at fulfilling human material and non-material needs, advancing social equity, expanding organizational effectiveness and building human and technical capacity towards sustainability. The objectives of sustainability require the protection of the natural resource base upon which future development depends. To Gandhi, valuing Nature and non-human life forms in an intrinsic way, has also to become an integral part of development. The Gandhian model of development is aimed not just at protecting Nature but at creating an ecological society that lives in harmony with Nature. This calls for reconciling economic activity with social progress and environmental protection. In the Gandhian model, the promotion of human well-being does not have to depend upon the destruction of Nature.

The Gandhian model represents an important example of the new environmentalist approach. It seeks to reconcile the ecological, social and economic dimensions of development, now and into the future, and adopts a global perspective in this task. It aims at promoting a form of development that is contained within the ecological carrying capacity of the planet, which is socially just and economically inclusive. It focuses not upon individual advancement, but upon protecting the common future of humankind.

Gandhi challenges industrial societies not only to reduce the resource intensity of production (sustainable production), but also to undertake new patterns of consumption that reduce the levels of consumption and change what is consumed and by whom (sustainable consumption). This would create the conditions necessary for equitable and sustainable development.

Despite profound economic and social changes that have taken place since Gandhi's lifetime, his ideas continue to be relevant today. The Gandhian vision of alternative development visualizes the creation of economies and societies based on love, non-violence, cooperation, harmony, contentment, and fulfilment of need, not greed. It essentializes the following: sustainable production, distribution and consumption; the use of appropriate technology; democratic inclusion and participation of all; local control; empowerment of the marginalised; and insists that all human activity be governed by the philosophy of ecologism (which believes that man is only one among millions of other species on this planet and that he should practice peaceful coexistence with them); as well as the philosophy of holism (which believes that development should be balanced, comprehensive and inclusive). Embedded in this Gandhian vision is the conviction that development is not development, if it does not incorporate gender development, rural development and humane development.

The Gandhian vision of development is clear in its conviction that development is not simply about economic growth, food production, modern equipment or technology transfer. Development is about people. It is humanity in all its dimensions, in full possession of dignity and human rights. It is humanity developed in all its capacities of imagination, creativity, choice, decision-making, and of responsibility to its natural and social environment.

It is imperative and urgent that we increasingly make use of Gandhian ideas and strategies for a global non-violent awakening, and consequent qualitative socio-economic transformation for dignified human survival. This requires the development of a new world view, a new weltanshauung, based on Gandhi's ideas and vision for a better world. This will seek to avoid violence which divides humankind for the well-being of some, and promote values which will unite us for the well-being of all. The challenges of Globalization make it essential for us to rediscover Mahatma Gandhi and the moral imperative of his eternal wisdom.

ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58